ಪ್ರಜಾವಾಣಿ
ಭಾನುವಾರ • ಸೆಪ್ಟೆಂಬರ್ 10, 2023

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದಿಂದ 'ಅಲುಮ್ನಿ ಅಸೋಸಿಯೇಷನ್ ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಕುರಿತ ಕಾರ್ಯಕ್ರಮಗಳು, ಲೇಖನಗಳು ಮಹತ್ವ ಪಡೆಯುತ್ತಿಲ್ಲ. ಇದನ್ನು ಪ್ರೋತ್ಸಾಹಿಸಲು ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಗೆ ಪತ್ರಕರ್ತರು, ಕೃಷಿಕರು, ವಿಸ್ತರಣಾ ಕಾರ್ಯಕರ್ತರು, ವಿಜ್ಞಾನಿಗಳು ಮತ್ತು ಅಧಿಕಾರಿಗಳು ಸೆ. 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಹಳೆಯ ವಿದ್ಯಾರ್ಥಿಗಳ ಸಂಘ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು-560024ಗೆ ಸಲ್ಲಿಸಬಹುದು. ಮಾಹಿತಿಗೆ: www.alumniuasb.in, alumniuasb83@gmail.com ಅಥವಾ 080-23410754ಗೆ ಸಂಪರ್ಕಿಸಬಹುದು.

ಕನ್ನಡಪ್ರಭ
ಭಾನುವಾರ 10.9.2023

ಕೃಷಿ ಮಾಧ್ಯಮ ಪ್ರಶಸ್ತಿಗೆ ಅರ್ಹರಿಂದ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಗಳ ಸಂಘ 'ಕೃಷಿ ಮಾಧ್ಯಮ ಪ್ರಶಸ್ತಿ' ಸ್ಥಾಪಿಸಿದ್ದು ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ದೇಶದ ಶೇಕಡ 55ರಷ್ಟು ಜನಸಂಖ್ಯೆಯ ಮುಖ್ಯ ಕಸುಬು ಕೃಷಿಯಾಗಿದ್ದರೂ ಸಹ ಕೃಷಿ ಕುರಿತ ಕಾರ್ಯಕ್ರಮಗಳು, ಲೇಖನಗಳು, ಯಶಸ್ವಿ ರೈತರ ಯಶೋಗಾಥೆಗಳು ಟಿವಿ, ರೇಡಿಯೋ, ದಿನಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮಹತ್ವ ಪಡೆಯುತ್ತಿಲ್ಲ. ಇದನ್ನು ಮನಗಂಡು ವಿವಿಯ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಪ್ರಶಸ್ತಿ ಸ್ಥಾಪಿಸಲಾಗಿದೆ. ಪತ್ರಕರ್ತರು, ಕೃಷಿಕರು, ವಿಸ್ತರಣಾ ಕಾರ್ಯಕರ್ತರು, ವಿಜ್ಞಾನಿಗಳು, ಅಧಿಕಾರಿಗಳು ಅರ್ಜಿ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಯನ್ನು ಹಳೆಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 024 ಇವರಿಗೆ ಸೆ.30 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ: 080 2341 0754 ಸಂಪರ್ಕಿಸಬಹುದು.

ಸಂಜೆವಾಣಿ
ಶನಿವಾರ 9 ಸೆಪ್ಟೆಂಬರ್ 2023
ಬೆಂಗಳೂರು

ಕೃಷಿ ಮಿತ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

(ಸಂಜೆವಾಣಿ ಪ್ರತಿನಿಧಿಯಿಂದ)

ಬೆಂಗಳೂರು,ಸೆ.9:ಗಾಂಧಿ ಕೃಷಿ ವಿಜ್ಞಾನಕೇಂದ್ರ ಬೆಂಗಳೂರು (ಜಿಕೆವಿಕೆ) ಹಳೆ ವಿದ್ಯಾರ್ಥಿಗಳ ಸಂಘದಿಂದ ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿ ಆರಂಭಿಸಲಾಗಿದೆ. ದೇಶದಲ್ಲಿ ಶೇ.55ರಷ್ಟು ಜನಸಂಖ್ಯೆ ಕೃಷಿಯನ್ನವಲಂಬಿಸಿದ್ದಾರೆ.

ಆದರೂ ಸಹ ಕೃಷಿ ಕುರಿತ ಕಾರ್ಯಕ್ರಮಗಳು, ಲೇಖನಗಳು ಯಶಸ್ವಿ ರೈತ ಯಶೋಗಾಥೆಗಳು ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚಿನ ಮಹತ್ವ ಪಡೆಯುತ್ತಿಲ್ಲ.ಕೃಷಿಗೆ ಸಂಬಂಧಿಸಿದ ವಿಷಯಗಳು ಸಾಮಾಜಿಕ ಜಾಲತಣಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುವ ನಿಟ್ಟಿನಲ್ಲಿ ನೂತನ ಪ್ರಯತ್ನವಾಗಿ ಕೃಷಿ ಮಾಧ್ಯಮ ಪ್ರಶಸ್ತಿ ಆರಂಭಿಸಲಾಗಿದೆ.

ಪತ್ರಕರ್ತರು, ವರದಿಗಾರರು, ಕೃಷಿಕರು, ಕಾರ್ಯಕರ್ತರು, ವಿಜ್ಞಾನಿಗಳು, ಅಧಿಕಾರಿಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಹಳೆಯ ವಿದ್ಯಾರ್ಥಿಗಳ ಸಂಘ ಕೃಷಿ ವಿಶ್ವವಿಸ್ಯಾನಿಲಯ, ಹೆಬ್ಬಾಳ, ಬೆಂಗಳೂರು-560024 ಇವರಿಗೆ ಸೆ. 30ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನಮಾಹಿತಿಗಾಗಿ080-23410754, 2008:alumniuasb83@gmail.comಜಾಲತಾಣ www.ammiush in ಇಲ್ಲಿ ಸಂಪರ್ಕಿಸಬಹುದು.

ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಹಳೇ ವಿದ್ಯಾರ್ಥಿಗಳ ಸಂಘದಿಂದ ದೇಶದಲ್ಲೇ ನೂತನ ಪ್ರಯತ್ನವಾಗಿ ಪ್ರಪ್ರಥಮ ಬಾರಿಗೆ 'ಅಲಿಮ್ನಿ ಅಸೋಸಿಯೇಷನ್ ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿ'ಯನ್ನು ಪ್ರಾರಂಭಿಸಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ದೇಶದಲ್ಲಿ ಶೇ.55ರಷ್ಟು ಜನಸಂಖ್ಯೆಯ ಮುಖ್ಯ ಕಸಬು ಕೃಷಿ. ಆದರೂ ಸಹ ಕೃಷಿ ಕುರಿತ ಕಾರ್ಯಕ್ರಮ, ಲೇಖನ, ಯಶಸ್ವಿ ರೈತರ ಯಶೋಗಾಥೆಗಳು ಟಿ.ವಿ, ರೇಡಿಯೋ, ದಿನಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಮಹತ್ವ ಪಡೆಯುತ್ತಿಲ್ಲ. ಇದನ್ನು ಮನಗಂಡು ಹಳೇ ವಿದ್ಯಾರ್ಥಿಗಳ ಸಂಘ ಹಾಗೂ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಸಂಯುಕ್ತಾಶ್ರಯಲ್ಲಿ ಪ್ರಪ್ರಥಮ ಬಾರಿಗೆ 'ಅಲಿಮ್ನಿ ಅಸೋಸಿಯೇಷನ್ ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿ'ಯನ್ನು ಪ್ರಾರಂಭಿಸಿದೆ. ಇದಕ್ಕೆ ಪತ್ರಕರ್ತರು/ವರದಿಗಾರರು/ಕೃಷಿಕರು/ವಿಸ್ತರಣಾ ಕಾರ್ಯಕರ್ತರು/ ವಿಜ್ಞಾನಿಗಳು/ ಅಧಿಕಾರಿಗಳು ಪ್ರಶಸ್ತಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆಸಕ್ತರು ತಮ್ಮ ಸ್ವವಿವರಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಹಳೇ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಪಶು ವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು-560 024 ವಿಳಾಸಕ್ಕೆ ಸೆ.30ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ 080- 2341 0754 ಅಥವಾ alumniuasb83@gmail.com ಅಥವಾ www.alumniuasb.in ಸಂಪರ್ಕಿಸಬಹುದಾಗಿದೆ.

ಬೆಂಗಳೂರು 5
ಉದಯವಾಣಿ
ಭಾನುವಾರ, ಸೆಪ್ಟೆಂಬರ್ 10, 2023

For more information visit
University Library Website
Web - uasbagrilibindia.org
E-mail- librarian@uasbangalore.edu.in

ವಿ ರೈತ ಮಿತ್ರ

●ಭತ್ತದಲ್ಲಿ ಆಝೋಸ್ಪೈರಿಲಂ ಜೀವಾಣು ಗೊಬ್ಬರ ಬಳಸುವ ವಿಧಾನ ತಿಳಿಸಿ.

।ರಾಜಪ್ಪ ನಾಗಮಂಗಲ

ಆಝೋಸ್ಪೈರಿಲಂ ಸೂಕ್ಷ್ಮಾಣುಜೀವಿಯು ಸಾರಜನಕವನ್ನು ಸ್ಥಿರೀಕರಿಸುತ್ತದೆ ಮತ್ತು ಸ್ವಲ್ಪ ಅಮ್ಲಜನಕವಿದ್ದರೂ ಬದುಕುಳಿಯಬಲ್ಲದು. ಈ ಜೀವಿಯು ಬೆಳೆಯ ಬೇರಿನ ಸಮೀಪ ಹಾಗೂ ಬೇರುಗಳಲ್ಲಿ ಪ್ರವೇಶಿಸಿ ಸಾರಜನಕ ಸ್ಥಿರೀಕರಣ ಮಾಡುತ್ತದೆ. ಇದನ್ನು ಏಕದಳ ಬೆಳೆಗಳು, ಎಣ್ಣೆ ಕಾಳು ಬೆಳೆಗಳಾದ ಸೂರ್ಯಕಾಂತಿ, ತೃಣ ಧಾನ್ಯ, ತರಕಾರಿ ಬೆಳೆಗಳು, ಹಿಪ್ಪು ನೇರಳೆ, ಹುಲ್ಲು ಮತ್ತು ಅಲಂಕಾರಿಕ ಗಿಡಗಳಲ್ಲಿ ಬಳಸಬಹುದು. ಕುಂಡಗಳಲ್ಲಿ ಬೆಳೆಸುವ ಸಸ್ಯಗಳಿಗೆ ಹಾಗೂ ನೀರಾವರಿ ಬೆಳೆಗಳಾದ ಭತ್ತ ಮತ್ತು ಕಬ್ಬಿನ ಬೆಳೆಗೆ ಅತಿ ಸೂಕ್ತ.



1. ಬೀಜೋಪಚಾರ (ನೇರ ಬಿತ್ತನೆ ಮಾಡುವಲ್ಲಿ): 1) 50 ಗ್ರಾಂ ಬೆಲ್ಲ ಅಥವಾ ಸಕ್ಕರೆಯನ್ನು ಅರ್ಧ ಲೀಟರ್ ನೀರಿನಲ್ಲಿ ಕರಗಿಸಿ 5 ನಿಮಿಷಗಳ ಕಾಲ ಕುದಿಸಿ ಅಂಟು ದ್ರಾವಣವನ್ನು ತಯಾರಿಸುವುದು. 2) ತಣಿದ ಬೆಲ್ಲ ಅಥವಾ ಸಕ್ಕರೆ ದ್ರಾವಣವನ್ನು ಭತ್ತದ ಮೇಲೆ ಸಮಾನವಾಗಿ ಲೇಪಿಸಿ ನಂತರ ಆಜೊಸ್ಪೈರಿಲಂ ಜೈವಿಕ ಗೊಬ್ಬರ (400 ಗ್ರಾಂ) ಮಿಶ್ರಣ ಮಾಡಿ, ಅನಂತರ ಅರ್ಧ ಗಂಟೆ ನೆರಳಿನಲ್ಲಿ ಒಣಗಿಸಿ ಸಸಿಮಡಿಗೆ ಉಪಯೋಗಿಸುವುದು.

2. ನಾಟಿ ಮಾಡುವ ಪ್ರದೇಶದಲ್ಲಿ ಉಪಯೋಗ: 800 ಗ್ರಾಂ ಆಝೋಸ್ಪೈರಿಲಂ ಜೈವಿಕ ಗೊಬ್ಬರವನ್ನು ನುಣ್ಣನೆ ಪುಡಿ ಮಾಡಿದ 10 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರ ಮತ್ತು 10 ಕಿ.ಗ್ರಾಂ ಮಣ್ಣಿನೊಡನೆ ಮಿಶ್ರಣಗೊಳಿಸಿ ಈ ಮಿಶ್ರಣ ಗೊಬ್ಬರವನ್ನು ಸಸ್ಯ ಕ್ಷೇತ್ರಕ್ಕೆ ಅಥವಾ 1 ಎಕರೆ ನಾಟಿ ಮಾಡುವ ಪ್ರದೇಶಕ್ಕೆ ನೇರವಾಗಿ ಎರಚಿ ಉಳುಮೆ ಮಾಡುವುದು.

3. ಸಸಿ ಬೇರುಗಳ ಉಪಚಾರ: 1) 6 ಅಡಿ ಉದ್ದ ಹಾಗೂ 6 ಅಡಿ ಅಗಲದ ಒಂದು ಹೊಂಡವನ್ನು ಮಾಡಿ ಇದರಲ್ಲಿ 4 ಅಂಗುಲ ನೀರು ನಿಲ್ಲಿಸಬೇಕು. 2) 400 ಗ್ರಾಂ ಆಝೋಸ್ಪೈರಿಲಂ ಗೊಬ್ಬರವನ್ನು ಹೊಂಡದಲ್ಲಿ ಹಾಕಿ ಮಿಶ್ರಣ ಮಾಡಿ. ಸಸಿಮಡಿಯಿಂದ ಕಿತ್ತ ಸಸಿಗಳನ್ನು 10 ರಿಂದ 15 ನಿಮಿಷಗಳ ಕಾಲ ಈ ಮಿಶ್ರಣದಲ್ಲಿ ಅದ್ದಿ ನಂತರ ನಾಟಿ ಮಾಡುವುದು.

।ಬಿ.ಪ್ರಿಯಾಂಕಾ ಸಸ್ಯರೋಗ ತಜ್ಞರು



● ಅಂಜೂರ ಬೆಳೆಯಲು ಮಣ್ಣು, ಹವಾಗುಣ ಹೇಗಿರಬೇಕು? ಉತ್ತಮ ತಳಿಗಳಾವುವು?

।ರಾಜೇಂದ್ರ ಬೆಂಗಳೂರು

ಅಂಜೂರವನ್ನು ಹಲವಾರು ವಿಧದ ಮಣ್ಣುಗಳಲ್ಲಿ ಬೆಳೆಯಬಹುದಾದರೂ, ಕ್ಷಾರವಲ್ಲದ ಆಳವಾದ ಗೋಡು ಮಣ್ಣು ಹೆಚ್ಚು ಸೂಕ್ತ. ಮಧ್ಯಮ ಕಪ್ಪು ಮಣ್ಣು ಉತ್ತಮ, ನೀರು ಬಸಿದು ಹೋಗುವಂತಿದ್ದರೆ ಒಳ್ಳೆಯದು. ಈ ಬೆಳೆ ಬರ ಸ್ಥಿತಿ ಮತ್ತು ಭೂಮಿಯಲ್ಲಿನ ಕ್ಲೋರೈಡ್ ಮತ್ತು ಸಲ್ಫೇಟ್ ಉಪ್ಪಿನಾಂಶವನ್ನು ಸಹಿಸಿಕೊಂಡು ಬೆಳೆಯಬಲ್ಲದು. ಸಾಧಾರಣ ಉಷ್ಣತೆ ಮತ್ತು ಕಡಿಮೆ ಆರ್ದ್ರತೆಯುಳ್ಳ ಹವಾಗುಣಗಳಿಗೆ ಹೊಂದಿಕೊಳ್ಳಬಲ್ಲದು ಹಾಗೂ ರಾತ್ರಿಯ ಉಷ್ಣಾಂಶ ತಂಪಾಗಿದ್ದರೆ ಹಣ್ಣಿನಲ್ಲಿ ಸಿಹಿ ಹೆಚ್ಚುತ್ತದೆ. ಜತೆಗೆ ಹಣ್ಣು ಪಕ್ವವಾಗುವಾಗ ಒಣ ಹವೆ ಅವಶ್ಯಕ. ಮಳೆ ಮತ್ತು ಆರ್ದ್ರತೆ ಹೆಚ್ಚಾದರೆ ತುಕ್ಕು ರೋಗ ಹರಡುತ್ತದೆ.

ತಳಿಗಳು: ಪೂನಾ, ಗಂಜಾಮ, ಬಳ್ಳಾರಿ, ಡಿಯನಾ ಇತ್ಯಾದಿ. ಇದನ್ನು ನಾಟಿ ಮಾಡಲು ಜೂನ್-ಜುಲೈ ತಿಂಗಳು ಸೂಕ್ತ ಮತ್ತು 15x9 ಅಡಿ ಅಂತರದಲ್ಲಿ 2x2x2 ಅಡಿ ಗಾತ್ರದ ಗುಣಿಗಳನ್ನು ತೆಗೆದು ನಾಟಿ ಮಾಡಬಹುದು.

।ಡಾ. ಎಂ.ಶಾಲಿನಿ ತೋಟಗಾರಿಕೆ ತಜ್ಞರು

●ಖುಷ್ಕಿ ಬೇಸಾಯದ ಬೆಳೆಯ ಉತ್ಪಾದಕತೆ ಹೆಚ್ಚಿಸಲು ಯಾವ ಅಂಶಗಳು ಗಮನವಹಿಸಬೇಕು?

।ನಾಗರಾಜ್ ಚಿತ್ರದುರ್ಗ

ಖುಷ್ಕಿ ಬೆಳೆಯ ಉತ್ಪಾದಕತೆಯು ಸೂಕ್ತವಾದ ಬೆಳೆ ಮತ್ತು ತಳಿಗಳು, ಬೇಸಾಯ ಕ್ರಮ, ಪೋಷಕಾಂಶಗಳ ನಿರ್ವಹಣೆ, ಮಳೆ ನೀರು ನಿರ್ವಹಣೆ, ಕೃಷಿ ಯಾಂತ್ರೀಕರಣ ಮತ್ತು ಉತ್ತಮ ಗುಣಮಟ್ಟದ ಬೀಜಗಳ ಮೇಲೆ ಅವಲಂಬಿತವಾಗಿರುತ್ತದೆ. ಇವುಗಳಲ್ಲಿ ಸೂಕ್ತವಾದ ಖುಷ್ಕಿ ಬೆಳೆಗಳು ಮತ್ತು ತಳಿಗಳ ಆಯ್ಕೆ, ಇಳುವರಿ ಮತ್ತು ಆದಾಯದ ಮೇಲೆ ಹೆಚ್ಚಿನ ಪಾತ್ರವಹಿಸುತ್ತದೆ. ಮೊದಲ ಹಂತದಲ್ಲಿ ಸೂಕ್ತವಾದ ಅಧಿಕ ಇಳುವರಿ ಕೊಡುವ ಬರನಿರೋಧಕ ಶಕ್ತಿ ಇರುವ ಬಹು ಉಪಯೋಗಿ ಖುಷ್ಕಿ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಎರಡನೇ ಹಂತದಲ್ಲಿ ಆಯ್ದ ಬೆಳೆಗಳಲ್ಲಿ ಹೆಚ್ಚಿನ ಇಳುವರಿ ಕೊಡುವ ಸೂಕ್ತ ತಳಿಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ, ಖುಷ್ಕಿ ಬೇಸಾಯದಲ್ಲಿ ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆಯುವಾಗ ಗಮನಿಸಬೇಕಾದ ಅಂಶಗಳೆಂದರೆ: ಬೆಳೆಯ ಅವಧಿ, ಬರ ಸಹಿಷ್ಣುತೆ, ಹೂ ಬಿಡುವ ಕಾಲ, ಮಳೆ ಬಂದಾಗ ಶೀಘ್ರವಾಗಿ ಬೆಳೆಯುವ, ಶುಷ್ಕ ವಾತಾವರಣಕ್ಕೆ ಹೊಂದಿಕೊಳ್ಳುವ, ಬೀಜಗಳು ಶೀಘ್ರವಾಗಿ ಅಂಕುರಿಸುವ, ಹೆಚ್ಚಿನ ಇಳುವರಿ, ಬಹು ಬೆಳೆ ಪದ್ಧತಿಗೆ ಸೂಕ್ತವಾದ, ದೀರ್ಘ ಬಿತ್ತನೆ ಕಾಲ ಹಾಗೂ ಬಹು ಬಳಕೆ. ಯಾವುದೇ ಒಂದು ಬೆಳೆಯಲ್ಲಿ ಈ ಗುಣಗಳು ಕಂಡು ಬರುವುದು ಅಪರೂಪವಾದರೂ, ಖುಷ್ಕಿ ಬೆಳೆಗಳನ್ನು ಆಯ್ಕೆ ಮಾಡುವಾಗ ಈ ಗುಣಗಳಿರುವ ಬೆಳೆಯನ್ನು ಆರಿಸಿಕೊಳ್ಳುವುದು ಸೂಕ್ತ.

।ಡಾ. ಬಿ.ಜಿ. ವಾಸಂತಿ ಮಣ್ಣು ವಿಜ್ಞಾನಿ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

11-09-2023
Vijayavani Pg 09

For more information visit
University Library Website
Web - uasbagrilibindia.org
E-mail- librarian@uasbangalore.edu.in

11-09-2023
Vijayavani Pg 03

ತತ್ತರಿಸಿದ ಮಧ್ಯಮ, ಕೆಳ ಮಧ್ಯಮ ವರ್ಗ | ಮಸಾಲೆ ಪದಾರ್ಥ ದರದಲ್ಲೂ ಏರಿಕೆ ಬರೆ | ಬಡವರ ಗೋಳು ಕೇಳೋರ್ಯಾರು?

ಭತ್ತ ದಾಸ್ತಾನು ಕೊರತೆ ಶೇ.30 ಅಕ್ಕಿ ಗಿರಣಿಗಳು ಬಂದ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಸಣ್ಣ, ಮಧ್ಯಮ, ಬೃಹತ್ ಸೇರಿ ಅಂದಾಜು 2,500 ಅಕ್ಕಿ ಗಿರಣಿಗಳ ಪೈಕಿ ಶೇ.30 ಭತ್ತದ ದಾಸ್ತಾನಿಲ್ಲದೆ ಮುಚ್ಚಿವೆ. ಕಾರ್ಮಿಕರನ್ನು ಹಿಡಿದಿಟ್ಟುಕೊಳ್ಳಲು, ಖರ್ಚು-ವೆಚ್ಚ ಸರಿದೂಗಿಸಲು ಲಭ್ಯ ದಾಸ್ತಾನು ಮಿತವಾಗಿ ಬಳಸಿ ಗಿರಣಿಗಳನ್ನು ಚಾಲ್ತಿಯಲ್ಲಿಟ್ಟಿದ್ದೇವೆ ಎಂದು ಕೆಲ ಅಕ್ಕಿ ಗಿರಣಿ ಮಾಲೀಕರು ಹೇಳುತ್ತಾರೆ. ಅಂತಾರಾಜ್ಯ ಭತ್ತ ಸಾಗಣೆಗೆ ನಿರ್ಬಂಧ ವಿಧಿಸಿಲ್ಲವಾದ್ದರಿಂದ ತಮಿಳುನಾಡಿಗೆ ಹಾಗೂ ಕೇರಳಕ್ಕೂ ಒಂದಿಷ್ಟು ಭತ್ತ ಹೋಗುತ್ತಿದೆ. ಸದ್ಯಕ್ಕೆ ಮಾರುಕಟ್ಟೆಯಲ್ಲಿ ಅಕ್ಕಿ ಲಭ್ಯವಿದ್ದರೂ ಮುಂದೆ ಹೀಗೆ ಎಂದು ಹೇಳುವ ಪರಿಸ್ಥಿತಿಯಿಲ್ಲವೆಂದು ಕೆಲವು ವರ್ತಕರು ಆಭಾವದ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದಾರೆ. ಅಕ್ಕಿ, ರಾಗಿ, ಜೋಳದ ಬೆಲೆ ಏರಿಕೆಯಿಂದ ಮಧ್ಯಮ, ಕೆಳ ಮಧ್ಯಮ ವರ್ಗ ತತ್ತರಿಸಲಾರಂಭಿಸಿದ್ದರೆ, ಉಳಿದ ದಿನಸಿ ಪದಾರ್ಥಗಳ ಬೆಲೆ ಬಡವರು ಮತ್ತು ಕಡುಬಡವರಿಗೆ ಭಾರವಾಗಿದೆ. ಸಾಮಾನ್ಯ ಬೆಳ್ತಿಗೆ, ಕುಚಲಕ್ಕಿ ಅಕ್ಕಿ ದರವೂ ಹೆಚ್ಚಿದೆ. ಅಕ್ಕಿಯಷ್ಟೇ ಅಲ್ಲ, ರಾಗಿ, ಜೋಳ, ತೊಗರಿ, ಕಡಲೆ, ಹೆಸರು, ಉದ್ದು, ಶೇಂಗಾ, ಸಕ್ಕರೆ, ಬೆಲೆಗಳು ಕೆಜಿಗೆ 10 ರಿಂದ 15 ರೂ.ನಂತೆ ಏರಿಕೆಯಾಗಿದ್ದರೆ, ಜೀರಿಗೆ, ಬೆಳ್ಳುಳ್ಳಿ, ಅರಿಶಿಣ ಮೊದಲಾದ ಮಸಾಲೆ ಪದಾರ್ಥಗಳು ಅಪರಿಮಿತವಾಗಿ ಏರಿಕೆಯಾಗಿದೆ.

ಪ್ರಸಕ್ತ ವರ್ಷದ ಪರಿಸ್ಥಿತಿ: ಪ್ರಸಕ್ತ ವರ್ಷದ ಮುಂಗಾರು ಹಂಗಾಮಿಗೆ 82.35 ಲಕ್ಷ, ಹಿಂಗಾರು 25.38 ಲಕ್ಷ ಹಾಗೂ ಬೇಸಿಗೆ ಹಂಗಾಮು 6.54 ಲಕ್ಷ ಹೆಕ್ಟೇರ್ ಸೇರಿ 114.27 ಲಕ್ಷ ಹೆ.ನಲ್ಲಿ ಬಿತ್ತನೆ ಗುರಿಯಿದೆ. 148.16 ಲಕ್ಷ ಟನ್ ಆಹಾರ ಧಾನ್ಯ, 13.84 ಲಕ್ಷ ಟನ್ ಎಣ್ಣೆಕಾಳುಗಳ ಉತ್ಪಾದನೆ ಗುರಿಯಿಟ್ಟುಕೊಳ್ಳಲಾಗಿದೆ.

kannada matrimony
Biggest Matrimony Service for Kannadigas
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ಸಮಗೆ ಕರೆ ಮಾಡಿ 70928 77888, ನೋಂದಣಿ ಉಚಿತ!
ಕನ್ನಡಿಗರ ನಂ.1 ಆಯ್ಕೆ 23 ವರ್ಷಗಳಿಂದ

ಧಾನ್ಯಗಳ ಬೆಲೆ ಗಗನಯಾನ

ಮೊದಲನೇ ಪುಟದಿಂದ...

ಮುನ್ನೆಚ್ಚರಿಕೆ ಕ್ರಮವಾಗಿ ಅಕ್ಕಿ ರಫ್ತು ನಿಷೇಧಿಸಿತು. ಬಾಸ್ಮತಿ ಬೀಲದಲ್ಲಿ ಸೋನಾ, ಆರ್‌ಎನ್‌ಆರ್ ಇನ್ನಿತರ ಅಕ್ಕಿತುಂಬಿರಫ್ತುಮಾಡಲಾಗುತ್ತಿದೆ ಎಂದು ತಿಳಿದು, ಬಾಸ್ಮತಿ ಅಕ್ಕಿ ರಫ್ತಿಗೂ ನಿರ್ಬಂಧ ವಿಧಿಸಿದೆ. ಆದರೂ ಆಹಾರ ಕೃಷಿ ಸಂಸ್ಥೆಯು ಸಾಮಾನ್ಯ ಅಕ್ಕಿ ಶೇ.9.8 ಹೆಚ್ಚಳವಾಗಿದೆ. ಕಳೆದ 15 ವರ್ಷಗಳ ದಾಖಲೆಯನ್ನು ಮೀರಿದೆ ಎಂದು ಸೂಚ್ಯಂಕದಲ್ಲಿ ತಿಳಿಸಿದೆ. ಗ್ರಾಹಕ ಸೂಚ್ಯಂಕ ದರವೂ ಇದೇ ಏರುಗತಿಯನ್ನು ಬಿಂಬಿಸಿದ್ದು, ಮುಂದಿನ ದಿನಗಳಲ್ಲಿ ಉತ್ತಮ ಗುಣಮಟ್ಟದ ಹಾಗೂ ಸಾಮಾನ್ಯ ಅಕ್ಕಿ ದರ ಏರಿಕೆಯಾಗುವ ದಿಗಿಲು ವ್ಯಕ್ತವಾಗುತ್ತಿದೆ.

ಉತ್ಪಾದನೆ ಇಳಿಮುಖ

2021-22ರ ಗುರಿ: ಆಹಾರಧಾನ್ಯಗಳು- 143.68 ಲಕ್ಷ ಟನ್, ಉತ್ಪಾದನೆ: 139.28 ಲಕ್ಷ ಟನ್, ಎಣ್ಣೆಕಾಳು- 11.98 ಲಕ್ಷ ಟನ್, ಉತ್ಪಾದನೆ- 11.10 ಲಕ್ಷ ಟನ್

2022-23ರ ಗುರಿ: ಆಹಾರ ಧಾನ್ಯಗಳು- 135.48 ಲಕ್ಷ ಟನ್, ಉತ್ಪಾದನೆ- 139.83 ಲಕ್ಷ ಟನ್, ಎಣ್ಣೆಕಾಳು- 15.23 ಲಕ್ಷ ಟನ್, ಉತ್ಪಾದನೆ- 11.53 ಲಕ್ಷ ಟನ್

ಹಿಂದಿನ 2 ವರ್ಷ ಅತಿವೃಷ್ಟಿ, ಈ ಬಾರಿ ಅನಾವೃಷ್ಟಿ ತಲೆದೋರಿದೆ. ಬೇಡಿಕೆ, ಬಳಕೆ ಹೆಚ್ಚಿದ್ದರೆ ಉತ್ಪಾದನೆ ಕುಸಿದಿದೆ. ಸಾಮಾನ್ಯದಿಂದ ಉತ್ತಮ ಗುಣಮಟ್ಟದ ಅಕ್ಕಿಯವರೆಗೆ ಪ್ರತಿ ಕೆಜಿಗೆ ತಲಾ 5ರಿಂದ 10 ರೂ.ಗಳ ತನಕ ಏರಿಕೆಯಾಗಿದೆ. ಮಾರುಕಟ್ಟೆಯಲ್ಲಿ ಖರೀದಿಗೆ ಅಕ್ಕಿ ಲಭ್ಯವಿರುವುದು ಸದ್ಯಕ್ಕಿರುವ ಸಮಾಧಾನ.

।ಪಿ.ಎಸ್. ಬಾಲಕೃಷ್ಣಶೆಟ್ಟಿ
ಎಪಿಎಂಸಿ ವರ್ತಕ, ಯಶವಂತಪುರ

ಪ್ರತಿ ವರ್ಷ ಉತ್ತಮ ಹೆಸರು ಬೆಳೆದಾಗ ಕ್ವಿಂಟಾಲ್‌ಗೆ 5ರಿಂದ 8 ಸಾವಿರ ರೂ. ಸಿಗುತ್ತಿತ್ತು. ಈ ವರ್ಷ 15 ಸಾವಿರ ರೂ. ತನಕ ಬಂಪರ್ ಬೆಲೆಯಿದೆ. ಮಳೆಯಿಲ್ಲದೆ ಬೆಳೆಯಿಲ್ಲ. ಬೆಲೆಯಿದ್ದಾಗ ಬೆಳೆ ಇರಲ್ಲ. ಬೆಳೆಯಿದ್ದಾಗ ಬೆಲೆ ಸಿಗಲ್ಲ. ರೈತರದು ಎಂತಹ ದೌರ್ಭಾಗ್ಯ ನೋಡಿ.


।ರಂಗಣ್ಣ ಬೆಣ್ಣೂರು ರೈತ, ಬೆನಕಟ್ಟಿ

vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು

ವಿದೇಶಿ ಕಂಪನಿಗಳ ಜತೆ ಹಲವು ರೈತರು ಒಪ್ಪಂದ

ಕಾಸು ಕೊಡಲಿದೆ ಕಾಂಡ್ಲಾ!

ಜೌಗು ಭೂಮಿಯಿಂದ ಬರಲಿದೆ ಆದಾಯ



ಸುಭಾಸ ಧೂಪದಹೊಂಡ ಕಾರವಾರ

ಸಸಿಗಳನ್ನು ನೆಟ್ಟು ಗಿಡವಾಗಿ ಬೆಳೆದ ನಂತರ ಅದರ ಫಲ, ಕಾಂಡ, ಬೇರು ಹಾಗೂ ತೊಗಟೆ ಮುಂತಾದವುಗಳನ್ನು ಮಾರಾಟ ಮಾಡಿ ಆದಾಯ ಗಳಿಸುವುದು ಸಾಮಾನ್ಯ ಸಂಗತಿ. ಆದರೆ, ನೆಟ್ಟ ಸಸಿಗಳು ಇಂಗಾಲದ-ಡೈ-ಆಕ್ಸೈಡ್ ಹೀರಿಕೊಳ್ಳುವ ಸಾಮರ್ಥ್ಯದಿಂದ ರೈತರು ಆದಾಯ ಗಳಿಸಬಹುದಾಗಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ 'ಇಂಗಾಲದ ಆದಾಯ' ಎಂಬ ಹೊಸ ಪ್ರಯೋಗ ಪ್ರಾರಂಭವಾಗಿದೆ.

ಬಹುರಾಷ್ಟ್ರೀಯ ಕಂಪನಿಗಳ ಜತೆ ಒಪ್ಪಂದ ಮಾಡಿಕೊಂಡು ಉತ್ತರ ಕನ್ನಡ ಜಿಲ್ಲೆಯ ಶರಾವತಿ, ಅಘನಾಶಿನಿ, ಕಾಳಿ ನದಿ ಹಿನ್ನೀರಿನ ಪ್ರದೇಶಗಳ ಸುಮಾರು 300 ಹೆಕ್ಟೇರ್ ಪಾಳು ಜೌಗು ಭೂಮಿಯಲ್ಲಿ 10 ಲಕ್ಷ ಕಾಂಡ್ಲಾ ಸಸಿಗಳನ್ನು ನಾಟಿ ಮಾಡಲಾಗಿದೆ. ಅದರ ಪರಿಶೀಲನೆ ನಡೆದಿದ್ದು, 'ರೈತರ ಕೂಟ' ರಚಿಸುವ ಕಾರ್ಯ ನಡೆದಿದೆ. ಒಪ್ಪಂದದಂತೆ ರೈತರು ಬರುವ ವರ್ಷ ಏಪ್ರಿಲ್‌ನಲ್ಲಿ ಆದಾಯ ಗಳಿಸಲಿದ್ದಾರೆ. ಹೊನ್ನಾವರದ ಸ್ನೇಹಕುಂಜ ಸಂಸ್ಥೆ ಹಾಗೂ ಇಂಡಿಯನ್ ಫೌಂಡೇಷನ್ ಫಾರ್ ಹ್ಯೂಮನಿಸ್ಟಿಕ್ ಡೆವಲಪ್‌ಮೆಂಟ್ (ಐಎಫ್‌ಎಚ್‌ಡಿ) ಸಂಸ್ಥೆಗಳು ಈ ಕಾರ್ಯ ನಡೆಸಿದ್ದು, ವಿದೇಶಿ ಕಂಪನಿ ಜತೆ ಹಲವು ರೈತರು ಒಪ್ಪಂದ ಮಾಡಿಕೊಂಡಿದ್ದಾರೆ. ಉಪ್ಪು ನೀರಿನ ಕಾರಣದಿಂದ ಯಾವುದೇ

ರೈತರಿಗೆಷ್ಟು ಆದಾಯ ..?

ಸ್ನೇಹಕುಂಜ ಹಾಗೂ ಐಎಫ್‌ಎಚ್‌ಡಿ ಸಂಸ್ಥೆಗಳು ಅಮೆರಿಕದ ವಾಷಿಂಗ್ಟನ್ ಡಿಸಿಯಿಂದ ಕಾರ್ಯನಿರ್ವಹಿಸುವ ವೆರ್ರಾ ಫೌಂಡೇಷನ್ ಎಂಬ ಸಂಸ್ಥೆಯ ಜತೆ ರೈತರಿಗೆ ಒಪ್ಪಂದ ಮಾಡಿಸುತ್ತಿವೆ. ಇದು ವಿಶ್ವದಲ್ಲಿ ಅತೀ ಹೆಚ್ಚು ಕಡೆ ಬಳಕೆಯಲ್ಲಿರುವ ಗ್ರಿನ್‌ಹೋಲ್ ಗ್ಯಾಸ್ ಕ್ರೆಡಿಟಿಂಗ್ ಪ್ರೋಗ್ರಾಂ ಜಾರಿ ಮಾಡುವ ಸಂಸ್ಥೆಯಾಗಿದೆ. ಇದರ ಪ್ರಕಾರ ನಾಟಿ ಮಾಡಿ ಗಿಡಗಳು ದೊಡ್ಡದಾದ ನಂತರ ಪ್ರತಿ ಹೆಕ್ಟೇರ್ ಕಾಂಡ್ಲಾ ವನಕ್ಕೆ ಪ್ರತಿ ವರ್ಷ 7 ರಿಂದ 10 ಸಾವಿರ ರೂ. ಆದಾಯ ಬರುತ್ತದೆ. ಕಾಂಡ್ಲಾ ದೊಡ್ಡದಾಗಿ ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಿಸಿಕೊಂಡಂತೆ ಆದಾಯ ಹೆಚ್ಚಳವಾಗುತ್ತದೆ. 15 ವರ್ಷಗಳವರೆಗೆ ಈ ಕಂಪನಿ ಆದಾಯ ನೀಡಲಿದೆ. ಮುಂದೆ 65 ವರ್ಷಗಳವರೆಗೆ ಬೇರೆ ಕಂಪನಿಯ ಜತೆಗೂ ಒಪ್ಪಂದ ಮಾಡಿಕೊಳ್ಳಬಹುದಾಗಿದೆ.



ಬೆಳೆ ಬೆಳೆಯಲು ಸಾಧ್ಯವಾಗದೆ 10-15 ವರ್ಷಗಳಿಂದ ಪಾಳು ಬಿದ್ದಿರುವ ಜೌಗು ಭೂಮಿಯಲ್ಲಿ (ಉಪ್ಪು ನೀರಿನ ಪಡಾ ಅಥವಾ ಗಜನಿ) ಕಾಂಡ್ಲಾ ಸಸಿಗಳನ್ನು ಈ ಸಂಸ್ಥೆಗಳು ನೆಡುತ್ತಿವೆ. ಕುಮಟಾ, ಹೊನ್ನಾವರ ತಾಲೂಕುಗಳಲ್ಲಿ ಈಗಾಗಲೆ ಕಾಂಡ್ಲಾ ನಾಟಿ ಮುಗಿದಿದ್ದು, ಕಾರವಾರ ತಾಲೂಕಿನಲ್ಲಿ ನಾಟಿ ಕಾರ್ಯ ಆಗಬೇಕಿದೆ.

ಆದಾಯ ಗಳಿಕೆ ಹೇಗೆ?: ಜಾಗತಿಕ ತಾಪಮಾನ ಏರಿಕೆ ತಡೆಯುವ ವಿಚಾರವಾಗಿ ವಿಶ್ವದಾದ್ಯಂತ ಚರ್ಚೆ ನಡೆದಿದೆ. ಈ ಸಂಬಂಧ 2015ರಲ್ಲಿ ವಿಶ್ವ ಸಂಸ್ಥೆಯಲ್ಲಿ ಪ್ಯಾರಿಸ್ ಒಪ್ಪಂದವಾಗಿದೆ. ವಿಶ್ವದ 190ಕ್ಕೂ ಅಧಿಕ ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿವೆ. ಇದರ ಪ್ರಕಾರ, ಪರಿಸರ ಉಳಿಸಲು, ಇಂಗಾಲ ಹೊರಸೂಸುವುದನ್ನು ಕಡಿಮೆ ಮಾಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿವಿಧ ಉದ್ದಿಮೆಗಳು ಹೊರಸೂಸುವ ಕಾರ್ಬನ್‌ಗೆ ವಿಶ್ವದ ಸುಮಾರು 26 ದೇಶಗಳು ತೆರಿಗೆ ವಿಧಿಸುತ್ತಿವೆ. ಕಾರ್ಬನ್ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಉದ್ದಿಮೆಗಳು ಪರಿಸರ ಉಳಿಸಿ, ಬೆಳೆಸುವ ಕಾರ್ಯ ಕೈಗೊಳ್ಳಬೇಕು ಎಂದು ಪರತ್ತು ವಿಧಿಸುತ್ತಿವೆ. ಮುಖ್ಯವಾಗಿ ಯೂರೋಪಿಯನ್ ದೇಶಗಳಲ್ಲಿ ಈ ವ್ಯವಸ್ಥೆ ಇದೆ. ಆದರೆ, ಅಲ್ಲಿ ಗಿಡ ಬೆಳೆಸಲು ಸೂಕ್ತ ಜಾಗ ಹಾಗೂ ವಾತಾವರಣವಿಲ್ಲ. ಇದರಿಂದ ಏಷ್ಯಾದ ಇಂಡೊನೇಷಿಯಾ, ಮಲೇಷಿಯಾ ಮುಂತಾದ ದೇಶಗಳಲ್ಲಿ ಗಿಡ ಬೆಳೆಸಲು ಮುಖ್ಯವಾಗಿ ಬಹುರಾಷ್ಟ್ರೀಯ ವಿಮಾನಯಾನ ಕಂಪನಿಗಳು ಹಣ ನೀಡುತ್ತಿವೆ. ಭಾರತದ ಸುಂದರ್‌ಬನ್ ಪ್ರದೇಶಗಳಲ್ಲೂ ಈ ಪ್ರಕ್ರಿಯೆ ನಡೆದಿದೆ.

ಕಾಂಡ್ಲಾವೇ ಏಕೆ?: ಉಪ್ಪು ನೀರು ಹಾಗೂ ಸಿಹಿನೀರು ಮಿಶ್ರಿತ ನದಿಗಳ ಹಿನ್ನೀರು ಅಥವಾ ಆಳಿವೆ ಪ್ರದೇಶದಲ್ಲಿ ಮಾತ್ರ ಬೆಳೆಯುವ ಸಸ್ಯಗಳನ್ನು ಕಾಂಡ್ಲಾ ಎನ್ನಲಾಗುತ್ತದೆ. ಇವು ವಾತಾವರಣದಿಂದ ಅತೀ ಹೆಚ್ಚು ಇಂಗಾಲವನ್ನು ಹೀರಿಕೊಳ್ಳುತ್ತವೆ. ಮಾತ್ರವಲ್ಲ ಇವು ಪ್ರವಾಹವನ್ನು ತಡೆಯುವ ಸಾಮರ್ಥ್ಯ ಹೊಂದಿವೆ. ಸಾವಿರಾರು ಜೀವ ಸಂಕುಲಗಳ ಆವಾಸ ಸ್ಥಾನವಾಗಬಲ್ಲವು. ಇದರಿಂದ ಈ ಬಾರಿ ಕೇಂದ್ರ ಸರ್ಕಾರವೂ ಕಾಂಡ್ಲಾ ಬೆಳೆಸುವ ಯೋಜನೆ ಹಾಕಿಕೊಂಡಿದೆ.

> ರೈತರು ಒಪ್ಪಿಕೊಂಡಿರುವ ಹಾಗೂ ಅವರಿಗೆ ಬೇರೆ ಯಾವುದೇ ಬಳಕೆಗೆ ಬಾರದೆ ಇರುವ ಜಾಗಗಳು, ದ್ವೀಪಗಳಲ್ಲಿ ಮಾತ್ರ ನಾವು ಕಾಂಡ್ಲಾ ಸಸಿಗಳನ್ನು ಬೆಳೆಸುತ ್ತಿದ್ದೇವೆ. ಆಯಾ ಪ್ರದೇಶಗಳಿಗೆ ಹೊಂದಿಕೆಯಾಗುವ ಪ್ರಭೇದದ ಕಾಂಡ್ಲಾವನ್ನು ಮಾತ್ರ ನೆಡುತ್ತಿದ್ದು, 10 ಲಕ್ಷ ಸಸಿ ನಾಟಿ ಮಾಡಲಾಗಿದೆ.
> | ಎನ್.ಆರ್. ಹೆಗಡೆ ಸ್ನೇಹಕುಂಜ ಹಾಗೂ ಐಎಫ್‌ಎಚ್‌ಡಿ ಪ್ರತಿನಿಧಿ

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಪ್ರಸಕ್ತ ಸಾಲಿನ (2023-24) 'ಕೃಷಿ ಪ್ರಶಸ್ತಿ' ಕಾರ್ಯಕ್ರಮದಡಿ ಮುಂಗಾರು ಹಂಗಾಮಿನ ಬೆಳೆ ಸ್ಪರ್ಧೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಸೆ.15ರವರೆಗೆ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಲು ಆ.31 ಕೊನೆ ದಿನ ಎಂದು ಪ್ರಕಟಿಸಲಾಗಿತ್ತು. ಈಗ ರೈತರಿಗೆ ಬೇಡಿಕೆಗೆ ಅನುಗುಣವಾಗಿ ಹಾಗೂ ಮತ್ತಷ್ಟು ಅರ್ಜಿಗಳನ್ನು ಆಹ್ವಾನಿಸುವ ಉದ್ದೇಶದಿಂದ ಅರ್ಜಿ ಸಲ್ಲಿಸುವ ಅವಧಿ ವಿಸ್ತರಿಸಲಾಗಿದೆ.

11-09-2023
Udyavanivani Pg 08

11-09-2023
Vijayavani Pg 09

11-09-2023
Viswavani Pg 08

ಭಾರತ-ಅಮೆರಿಕ ವ್ಯಾಪಾರ ಸರಾಗ

ವಿಶ್ವ ವ್ಯಾಪಾರ ಸಂಘಟನೆ ಒಪ್ಪಂದ ಅವಧಿಯ ಹಳೆ ತೊಡಕು ಪರಿಹಾರ

| ಅಮೆರಿಕದ ತೋಟಗಾರಿಕೆ -ಸಾಗರ ಉತ್ಪನ್ನಕ್ಕೆ ಭಾರತ ಸುಂಕ ಕಡಿತ

ವಾಷಿಂಗ್ಟನ್: ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಗೆ ಸಂಬಂಧಿಸಿದಂತೆ ಅಮೆರಿಕ ಮತ್ತು ಭಾರತದ ನಡುವೆ ಉಳಿದುಕೊಂಡೇ ಬಂದಿದ್ದ ಹಳೆಯ ವ್ಯಾಪಾರ ತೊಡಕು ಇದೀಗ ನಿವಾರಣೆ ಆಗಿದೆ. ಇನ್ನು ಮುಂದೆ ಅಮೆರಿಕ ತಾಜಾ ಹಣ್ಣುಗಳು ಮತ್ತು ಹಿಮಗಟ್ಟಿಸಿದ ಕುಕ್ಕುಟ ಮಾಂಸವನ್ನು ಭಾರತಕ್ಕೆ ಸರಾಗವಾಗಿ, ಯಾವುದೇ ಹೆಚ್ಚುವರಿ ಸುಂಕವಿಲ್ಲದೇ ರಫ್ತು ಮಾಡಬಹುದಾಗಿದೆ ಎಂದು 'ಯುನೈಟೆಡ್ ಸ್ಟೇಟ್ಸ್ ಟ್ರೇಡ್ ರೆಪ್ರೆಸೆಂಟಿಟಿವ್ '(ಯುಎಸ್‌ಟಿಆರ್) ತಿಳಿಸಿದೆ.

ಮುಂಬರುವ ದಿನಗಳಲ್ಲಿ ಅಮೆರಿಕದ ತೋಟಗಾರಿಕೆ ಮತ್ತು ಸಾಗರ ಆಹಾರ ಉತ್ಪನ್ನಗಳಿಂದ ಭಾರತದ ಮಾರುಕಟ್ಟೆಯಲ್ಲಿ ತುರುಸಿನ ಸ್ಪರ್ಧೆ ಏರ್ಪಡಲಿದೆ ಎಂದು ನಿರೀಕ್ಷಿಸಲಾಗಿದೆ. ಅದೇ ವೇಳೆ, ಭಾರತದ ಗ್ರಾಹಕರಿಗೂ ಅಮೆರಿಕದ ತಾಜಾ ಬ್ಲ್ಯೂಬೆರ್ರಿ ಮತ್ತು ಕ್ರಾ ್ಯನ್ ಬೆರ್ರೀಸ್ ಹಾಗೂ ಫ್ರೋಜನ್ ಟರ್ಕಿ ಮತ್ತು ಡಕ್ ಮಾಂಸ ಮೊದಲಾದ ಪೌಲ್ಟ್ರಿ ಉತ್ಪನ್ನಗಳು ಸ್ಪರ್ಧಾತ್ಮಕ ಬೆಲೆಗೆ ದೊರೆಯುವ ಸಾಧ್ಯತೆ ಇದೆ.

ಪ್ರಧಾನಿ ನರೇಂದ್ರ ಮೋದಿ ಅವರ ಆಸಕ್ತಿ ಮತ್ತು ಸಹಕಾರದ ಫಲವಾಗಿ ಭಾರತ ಮತ್ತು ಅಮೆರಿಕ ನಡುವೆ ಡಬ್ಲ್ಯುಟಿಒ ಒಪ್ಪಂದ ಅವಧಿಯಿಂದಲೂ ನನೆಗುದಿಗೆ ಬಿದ್ದಿದ್ದ ಒಪ್ಪಂದಗಳಿಗೆ ಈಗ ಉಭಯ ದೇಶಗಳು ಸಹಿ ಹಾಕಿವೆ. ಪರಿಣಾಮ, ಅಮೆರಿಕದ ತಾಜಾ ಮತ್ತು ಸಂಸ್ಕರಿಸಿದ ಮತ್ತು ಹಿಮಗಟ್ಟಿಸಿದ ಮತ್ತು ಬಣಗಿಸಿದ ಬ್ಲ್ಯೂಬೆರ್ರಿ ಮತ್ತು ಕ್ರಾ ್ಯನ್ ಬೆರ್ರೀಸ್ ಹಣ್ಣುಗಳು ಭಾರತಕ್ಕೆ ರಫ್ತು ಮಾಡಬಹುದಾಗಿದೆ. ಅದೇ ವೇಳೆ, ಫ್ರೋಜನ್ ಟರ್ಕಿ



ಬ್ಲ್ಯೂಬೆರ್ರಿ



ಕ್ರಾ ್ಯನ್ ಬೆರ್ರಿ

ಮತ್ತು ಡಕ್ ಮಾಂಸ ಸೇರಿದಂತೆ ವಿವಿಧ ಪೌಲ್ಟ್ರಿ ಉತ್ಪನ್ನಗಳನ್ನು ಭಾರತದ ಮಾರುಕಟ್ಟೆಗೆ ಹೆಚ್ಚುವರಿ ಸುಂಕವಿಲ್ಲದೇ ರವಾನಿಸಬಹುದಾಗಿದೆ ಎಂದು 'ಯುಎಸ್‌ಟಿಆರ್' ತಿಳಿಸಿದೆ.

ಇದಕ್ಕೂ ಮೊದಲು

ಇದೇ ವರ್ಷದ ಜೂನ್ ತಿಂಗಳಲ್ಲಿ ಅಮೆರಿಕ-ಭಾರತ ಹಳೆಯದಾದ ಡಬ್ಲ್ಯುಟಿಒ ಕಾಲದ 6 ವ್ಯಾಪಾರ ತಕರಾರುಗಳನ್ನು ಬಗೆಹರಿಸಿಕೊಂಡಿದ್ದವು. ಇದರಿಂದ ಅಮೆರಿಕದ ಬಾದಾಮಿ, ವಾಲ್‌ನಟ್, ಸೇಬು, ಬೋರಿಕ್ ಆಸಿಡ್, ಲೆಂಟಿಲ್ಸ್, ಚಿಕ್‌ಪೀಸ್ ಮೊದಲಾದ ಉತ್ಪನ್ನಗಳ ಮೇಲಿನ ಭಾರತದ ಆಮದು ಸುಂಕದಲ್ಲಿ ಗಣನೀಯ ಕಡಿತವಾಗಿತ್ತು.

'ಯುಎಸ್‌ಟಿಆರ್' ಹರ್ಷ

ಭಾರತ-ಅಮೆರಿಕ ನಡುವಿನ ವ್ಯಾಪಾರ ಸಂಬಂಧ ವೃದ್ಧಿಯ ಈ ಒಪ್ಪಂದದ ಪರಿಣಾಮವಾಗಿ ಅಮೆರಿಕದ ಕೆಲವು ಆಹಾರ ಉತ್ಪನ್ನಗಳಿಗೆ ಸುಂಕ ಕಡಿತಕ್ಕೆ ಭಾರತ ಒಪ್ಪಿಕೊಂಡಿದೆ. ಇದರಿಂದ ಅಮೆರಿಕ ತೋಟಗಾರಿಕೆ ಉತ್ಪನ್ನಗಳಿಗೆ ಬಹು ವಿಶಾಲವಾದ ಮಾರುಕಟ್ಟೆ ಲಭ್ಯವಾಗುತ್ತಿದೆ ಎಂದು 'ಯುಎಸ್‌ಟಿಆರ್' ಹರ್ಷ ವ್ಯಕ್ತಪಡಿಸಿದೆ. ಇದು ಅಮೆರಿಕದ ತೋಟಗಾರಿಕೆ ಬೆಳೆಗಾರರು, ಪೌಲ್ಟ್ರಿ ಉದ್ಯಮದವರಿಗಂತೂ ಲಾಭದಾಯಕ ಸುದ್ದಿಯಾಗಿದೆ ಎಂದೂ ಬೆಳೆಗಾರರು ಮತ್ತು ಪೌಲ್ಟ್ರಿ ಒಕ್ಕೂಟಗಳು ಪ್ರತಿಕ್ರಿಯಿಸಿವೆ.

ಅಕ್ಕಿ, ಬೇಳೆ-ಕಾಳು ಬೆಲೆ ಭಾರಿ ಏರಿಕೆ | ಬರ, ಉತ್ಪಾದನೆ ಕುಸಿತ ಕಾರಣ

ಧಾನ್ಯಗಳ ಬೆಲೆ ಗಗನಯಾನ

■ ವಿಜಯವಾಣಿ ಟೀಮ್

ಮುಂಗಾರು ಮಳೆ ಕೊರತೆಯಿಂದ ರೈತರು ಬಸವಳಿದಿದ್ದರೆ, ಗ್ರಾಹಕರು ಬೆಲೆ ಏರಿಕೆ ಬಿಸಿ ಅನುಭವಿಸುತ್ತಿದ್ದಾರೆ. ರಾಜ್ಯದಲ್ಲಿ ದಿನಸಿ ಪದಾರ್ಥಗಳ ಬೆಲೆ ರಾಕೆಟ್ ವೇಗದಲ್ಲಿ ಗಗನಕ್ಕೇರುತ್ತಿದೆ. ಅದರಲ್ಲೂ ಅಕ್ಕಿ, ತೊಗರಿ, ಹೆಸರು, ಉದ್ದು ಸೇರಿದಂತೆ ಆಹಾರಧಾನ್ಯಗಳ ಬೆಲೆ ಅಂದಾಜು ಮೀರಿ ಏರಿಕೆಯಾಗಿದ್ದು ಗ್ರಾಹಕರ ಜೇಬು ಸುಡುತ್ತಿದ್ದರೆ, ರೈತರಿಗೂ ಲಾಭ ಸಿಗದಂತಾಗಿದೆ. ಹಿಂದಿನ ಎರಡು ವರ್ಷ ಪ್ರವಾಹ, ಅತಿವೃಷ್ಟಿಯಿಂದ ಬೆಳೆಗಳು ನಾಶವಾದವು. ಈ ಬಾರಿ ಮಳೆ ಕಣ್ಣಾಮುಚ್ಚಾಲೆಯಿಂದ ರೈತರು ಎರಡನೇ ಬಾರಿ ಬಿತ್ತಿದ ಬೆಳೆಯೂ ನೆಲಕಚ್ಚಿದೆ. ಒಟ್ಟಾರೆ ಉತ್ಪಾದನೆ ಪ್ರಮಾಣ ಶೇ.30 ರಿಂದ 40ರಷ್ಟು ಕುಸಿಯುವ ಆತಂಕವಿದೆ. ಕಾವೇರಿ ಕೊಳ್ಳದ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಬೆಳೆಗೂ ನೀರಿನ ತತ್ವಾರವಿದೆ. ಐಆರ್ 64, ಜಯ ಮುಂತಾದ ಸಾಮಾನ್ಯ ಭತ್ತದ ಇಳುವರಿ, ಉತ್ಪಾದನೆ ಇಳಿಮುಖವಾಗಲಿದೆ. ಮಾರುಕಟ್ಟೆಗೂ ಬೆಳೆ ತಡವಾಗಿ ಪ್ರವೇಶಿಸುವ ಸಾಧ್ಯತೆಗಳಿವೆ ಎಂದು ಅಂದಾಜಿಸಲಾಗಿದೆ.

ಕೃಷ್ಣಾ ಕೊಳ್ಳದ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಬೆಳೆಗೆ ಸಾಕಾಗುವಷ್ಟು ನೀರಿದೆ. ಆದರೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ತಡವಾಗಿ ಮಳೆ ಸುರಿದ ಕಾರಣ ಕೃಷ್ಣಾ ಜಲಾನಯನದ ಆಣೆಕಟ್ಟೆಗೆ ತಡವಾಗಿ ನೀರು ಶೇಖರಣೆಯಾಗಿದೆ. ಇದರಿಂದಾಗಿ ನೀರಾವರಿ ಅಚ್ಚುಕಟ್ಟು ಪ್ರದೇಶದ ಇಳುವರಿಗೆ ಸ್ವಲ್ಪ ಪೆಟ್ಟುಬೀಳಲಿದೆ. ನವೆಂಬರ್ ಬದಲು ಡಿಸೆಂಬರ್‌ನಲ್ಲಿ ಭತ್ತ ನುರಿಸುವ, ಮಾರುಕಟ್ಟೆಗೆ ಅಕ್ಕಿ ಆವಕ ಹೆಚ್ಚುವ ನಿರೀಕ್ಷೆಯಿದೆ.

ದುಬಾರಿ ದುನಿಯಾ: ಆಹಾರಧಾನ್ಯಗಳ ಉತ್ಪಾದನೆ ಇಳಿಕೆ ಹಾದಿಯಲ್ಲಿರುವ ಕಾರಣ ಬೆಲೆ ದುಬಾರಿಯಾಗುವುದು ನಿಶ್ಚಿತ. ರಾಜ್ಯದಲ್ಲಿ ವಾರ್ಷಿಕ 65 ಲಕ್ಷ ಟನ್ ಭತ್ತ ಉತ್ಪಾದನೆಯಾಗುತ್ತದೆ. ಮಳೆ ಕೊರತೆಯಿಂದ ಈ ಬಾರಿ 45 ಲಕ್ಷ ಟನ್‌ಗೆ ಕುಸಿಯುವ ಅಂದಾಜಿದೆ. ಇದರಲ್ಲಿ ಹೆಚ್ಚಿನ ಪ್ರಮಾಣದ ಅಕ್ಕಿ ಪಡಿತರ, ಹಾಸ್ಟೆಲ್, ಬಿಸಿಯೂಟಕ್ಕೆ ಬಳಕೆಯಾಗಲಿದ್ದು, ಉತ್ತಮ ಗುಣಮಟ್ಟದ ಅಕ್ಕಿ ಮುಕ್ತ ಮಾರುಕಟ್ಟೆಗೆ ಹೋಗುತ್ತದೆ. ಬೇಗ ತಯಾರಿ, ಸುಲಭ ಪಚನವೆಂಬ ಕಾರಣಕ್ಕೆ ಜಾಗತಿಕವಾಗಿ ಅಕ್ಕಿ ಬಳಸುವವರ ಸಂಖ್ಯೆ ಏರುತ್ತಿದೆ. ಪ್ರತಿದಿನ ಒಬ್ಬರಿಗೆ ತಲಾ 200 ಗ್ರಾಮ್ ನಂತೆ ಲೆಕ್ಕ ಹಾಕಿದರೂ ಶೇ.30ರಷ್ಟು ಅಕ್ಕಿ ಕೊರತೆಯಿದೆ ಎಂದು ತಜ್ಞರು ಹೇಳುತ್ತಾರೆ. ಮಳೆ ಅಭಾವದ ವ್ಯತಿರಿಕ್ತ ಪರಿಣಾಮವನ್ನು ಕೇಂದ್ರ ಸರ್ಕಾರ ಅಂದಾಜಿಸಿದೆ. ಪುಟ 3



ವಿ ವಿ|ಶೇ|ಷ

ಸಗಟು ದರ (ಕ್ವಿಂಟಾಲ್, ರೂ.ಗಳಲ್ಲಿ)

ಧಾನ್ಯ	ಹಿಂದೆ	ಈಗ
ಜಯ ಅಕ್ಕಿ	3,600	3,800
ಸ್ಟೀಮ್ ಅಕ್ಕಿ	4,700	4,900
ಸೋನಾ ರಾ ರೈಸ್	5,800	5,900
ಸುಪರ್‌ಫೈನ್ ಕೋಲಂ	6,700	6,900
ಆರ್‌ಎನ್‌ಆರ್ ಅಕ್ಕಿ	5,700	6,000
ಎಚ್‌ಎಂಟಿ ಅಕ್ಕಿ	5,800	6,000
ಜೋಳ	5,900	6,100
ರಾಗಿ	4,100	4,400
ತೊಗರಿ ಬೇಳೆ	12,000	16,500
ಹೆಸರು	9,500	12,800
ಉದ್ದು	9,000	14,000
ಕಡಲೆ	5,400	7,300
ಶೇಂಗಾ	11,200	12,100

ಚಿಲ್ಲರೆ ಮಾರಾಟ ದರ (ಕೆ.ಜಿ., ರೂ.ಗಳಲ್ಲಿ)

ಜಯ ಅಕ್ಕಿ	38ರಿಂದ 41
ಸ್ಟೀಮ್ ಅಕ್ಕಿ	47ರಿಂದ 53
ಸೋನಾ ರಾ ರೈಸ್	54ರಿಂದ 63
ಸೂಪರ್‌ಫೈನ್ ಕೋಲಂ	60ರಿಂದ 71
ಆರ್‌ಎನ್‌ಆರ್ ಅಕ್ಕಿ	55ರಿಂದ 64
ಎಚ್‌ಎಂಟಿ ಅಕ್ಕಿ	53ರಿಂದ 61
ಜೋಳ	60ರಿಂದ 63
ರಾಗಿ	42ರಿಂದ 45
ತೊಗರಿ ಬೇಳೆ	140ರಿಂದ 180
ಹೆಸರು	110ರಿಂದ 125
ಉದ್ದು	115ರಿಂದ 130
ಕಡಲೆ	72ರಿಂದ 85
ಶೇಂಗಾ	125ರಿಂದ 132

(ಮಾರುಕಟ್ಟೆ ಜಾಲ್ಲಿ ಪ್ರವೃತ್ತಿ ಆಧರಿಸಿ ವಿಶ್ಲೇಷಣಾತ್ಮಕ ಬೆಲೆಗಳಿವು. ಬೆಂಗಳೂರು ನೇರಿ ರಾಜ್ಯದ ಕೆಲವು ಮಾರುಕಟ್ಟೆಗಳಲ್ಲಿ ಈ ದರದಲ್ಲಿ ನಾಲ್ಕೈದು ರೂ.ಗಳ ವ್ಯತ್ಯಾಸ ಸಹಜ.)

ಬಾಗಲಕೋಟೆ ಎಪಿಎಂಸಿಗೆ ವಾರ್ಷಿಕ 1.50 ಲಕ್ಷ ಟನ್ ಹೆಸರು ಆವಕವಾಗುತ್ತಿತ್ತು. ಈ ಸಲ ಸೀಜನ್ ಮುಗಿಯುತ್ತಿದ್ದರೂ 20 ಸಾವಿರ ಕ್ವಿಂಟಾಲ್ ಬಂದಿದೆ. ಹೆಸರು ವಹಿವಾಟಿನಿಂದ ಕಳೆದ ವರ್ಷ 17.50 ಲಕ್ಷ ರೂ. ಸೆಸ್ ಎಪಿಎಂಸಿಗೆ ಸಂಗ್ರಹವಾಗಿತ್ತು.

| ಗಂಗಾಧರ ಬಗಲಿ ಸಹಕಾರ್ಯದರ್ಶಿ, ಎಪಿಎಂಸಿ ಬಾಗಲಕೋಟೆ

ಕೃತಕ ಅಭಾವ ಶಂಕೆ

ಹಿಂದಿನ ಎರಡು ವರ್ಷಗಳ ಕಾಲ ಆಹಾರಧಾನ್ಯ, ಬೇಳೆಕಾಳುಗಳು ಮಾರುಕಟ್ಟೆ ಆವಕ ಕುಸಿದರೆ, ಈ ಬಾರಿ ಬರಗಾಲ ವಕ್ಕರಿಸಿ ಉತ್ಪಾದನೆ ಕುಸಿಯುವ ಲಕ್ಷಣಗಳು ನಿಚ್ಚಳವಾಗಿವೆ. ಪರಿಸ್ಥಿತಿಯ ದುರ್ಲಾಭ ಪಡೆಯಲು ಕೃತಕ ಅಭಾವ ಸೃಷ್ಟಿಸಿರುವ ಶಂಕೆಯಿದೆ. ದಾಸ್ತಾನು ಹಿಡಿದಿಟ್ಟು ಮತ್ತೂ ಹೆಚ್ಚಿನ ಲಾಭಕ್ಕೆ ಹವಣಿಸಿದ ಸಾಧ್ಯತೆಗಳಿವೆ. ಕೈಯಲ್ಲಿ ಬೆಳೆಯಿಲ್ಲದ ಕಾರಣ ರೈತರಿಗೆ ಬೆಲೆ ಏರಿಕೆ ಲಾಭ ಸಿಗುತ್ತಿಲ್ಲ. ಹೆಚ್ಚಿನ ಬೆಲೆ ತೆರುವ ಗ್ರಾಹಕರಿಗೆ ಸುಖವಿಲ್ಲ. ಆದರೆ ಮಧ್ಯವರ್ತಿಗಳು, ಆಕ್ರಮ ದಾಸ್ತಾನಿಟ್ಟುಕೊಂಡವರಿಗೆ ಅನುಕೂಲವಾಗಿದೆ ಎಂದು ರೈತರು ದೂರುತ್ತಾರೆ. ಬೆಲೆಗಳ ಏರಿಕೆಯ ಮೇಲೆ ನಿಗಾವಹಿಸಿ, ಅನಿರೀಕ್ಷಿತ ತಪಾಸಣೆಯಂತಹ ತುರ್ತು ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಬೇಕು ಎಂದು ಗ್ರಾಹಕರು ಒತ್ತಾಯಿಸುತ್ತಿದ್ದಾರೆ. ಕಡಿಮೆ ಗುಣಮಟ್ಟದ ಅಕ್ಕಿ ಮತ್ತಿತರ ಆಹಾರಧಾನ್ಯವು ಎಥನಾಲ್ ಉತ್ಪಾದನೆಗೆ ಬಳಕೆಯಾಗುತ್ತಿದ್ದು, ಈ ದರಗಳ ಏರಿಕೆಗೆ ಮತ್ತೊಂದು ಕಾರಣವೆಂಬ ತರ್ಕವಿದೆ.

11-09-2023
Vijayavani Pg 01

Apple country gets ground ready for cannabis cultivation

Vikas Vasudeva
CHANDIGARH

With the Himachal Pradesh government taking steps to legalise cannabis (hemp) cultivation in the State, growers are upbeat and optimistic about getting an economic boost. A committee comprising lawmakers that explored the possibility of legal cultivation of cannabis recently recommended cultivation of cannabis for "non-narcotic use of cannabis for medicinal, industrial, and scientific use".

However, there are social concerns, especially of adolescents and youth being drawn towards the use and abuse of cannabis, the nexus between illegal producers and suppliers of cannabis getting stronger, the risk of pilferage, and the occurrence of amotivational syndrome.

Hemp is a botanical class of *Cannabis sativa* cultivars grown specifically for industrial or medicinal use. It is produced in parts of Himachal Pradesh, though it is illegal under the Narcotic Drugs and Psychotropic Substances (NDPS) Act, 1985.

The State Cabinet approval is awaited after which a policy is expected to be framed soon by the State government on cannabis cultivation, keeping in view the provisions of the NDPS Act, 1985, and the NDPS Rules, 1989.

Raising revenue

Even as there has been a growing concern surrounding the drug menace, State Revenue Minister Jagat Singh Negi, who headed the five-member committee, said the government was committed to curbing the problem and that while steps were being taken in this regard, the cultivation of cannabis would be limited only for industrial, medicinal and scientific use.

The policy on hemp cultivation for medicinal, industrial, and scientific uses would pave the way for utilising the medicinal properties of cannabis to treat patients, besides raising revenue for the State from the products made of hemp, the Minister said.

Allowing cannabis cultivation would also reaffirm the government's commitment to safeguarding the interests of the farmers, who have been long demanding to lift the ban on cultivation.



Cash crop: Hemp is a botanical class of *Cannabis sativa* cultivars grown specifically for industrial or medicinal use. K.R. DEEPAK

The NDPS Act of 1985, imposes a ban on extracting the resin and flowers from the plant, but the law determines the method and extent of its cultivation for medicinal and scientific purposes.

Section 10 (a) (iii) of the Act empowers the States to make rules regarding the cultivation of any cannabis plant, production, possession, transport, consumption, use and purchase and sale, and consumption of cannabis (except charas). The States are empowered to permit, by general or special order, the cultivation of hemp only for obtaining fibre or seeds or for horticultural purposes.

In 2017, Himachal Pradesh's neighbour Uttarakhand became the first State in the country to legalise cannabis cultivation.

Ranjit Singh Ghuman, a Professor of Eminence (economics) at Guru Nanak Dev University in Amritsar, recently headed a study titled "Dynamics of drug addiction and abuse in northwest India: social, economic and political implications" that pointed out that approximately 95% drug addicts in Himachal Pradesh are using cannabis and its byproducts.

"Not getting into the government's arguments for legalising the cultivation of cannabis, it is likely to encourage adolescents and youth towards the use and abuse of cannabis. It may, however, help addicts to shift from the use of more harmful drugs to less harmful drugs but there is a very high probability that it may end up in life-long addiction," he said.

Dr. Ghuman added, "Besides, the nexus between illegal producers and suppliers of cannabis, and politicians is promoting the use of cannabis and its by-products. There is a need to curb the supply of drugs and address the socio-cultural, economic and political factors."

'Multiple effects likely'

Sandeep Bhola, a technical expert and master trainer for United Nations Office on Drugs and Crime, and National AIDS Control Organisation, said, "Cannabis is known to cause psychiatric symptoms in the users which may be temporary and with prolonged use these may become permanent. Amotivational syndrome is known to occur with cannabis use, in which the user loses interest as well as the strength to do any chores. Serious psychotic symptoms are known to occur with cannabis use."

Dharamvira Gandhi, a former MP from Patiala in Punjab who presented a Private Member's Bill in Parliament to amend the NDPS Act in 2016, seeking to decriminalise opium, marijuana and poppy husk, has welcomed the decision.

He said, "The NDPS Act was enacted in order to meet the then United Nations Conventions on Drug Policy in the year 1985. The objective was to prevent rampant drug use in society. But the war on drugs had led to the creation of a dangerous drug mafia, hundreds of scores of human rights violations and innumerable precious lives destroyed. As the common man's recreational substances were made unavailable, the newer, more potent, addictive and dangerous alternative drugs flooded the markets."

Cannabis has been growing in Himachal Pradesh for decades, and those in favour of its cultivation point out that hemp has multiple uses ranging from phytoremediation, fibre-cloth manufacturing, medicinal use, and use in the pulp and paper industry.

Due to the recreational use of its products as 'charas' and 'ganja', the positives of this sturdy plant has been overlooked.

11-09-2023
Hindu Pg 12

ತೊಗರಿ ಬೇಳೆ ಗಗನಮುಖಿ ಬೆಲೆ

ಕ್ವಿಂಟಲ್‌ಗೆ ₹12,746 ಮುಟ್ಟಿದ ದರ



• ಮನೋಜಕುಮಾರ್ ಗುದ್ದಿ

ರಾಜ್ಯದ ಕರ್ನಾಟಕದ ಪ್ರಮುಖ ಬೆಳೆಯಾದ ತೊಗರಿಯ ಬೆಲೆಯು ಈಗ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹12,746ಕ್ಕೆ ತಲುಪಿದೆ. ಸಾರ್ವಕಾಲಿಕ ಗರಿಷ್ಠ ಬೆಲೆ ಇದು. ಇದರ ನೇರ ಪರಿಣಾಮ ಗ್ರಾಹಕರ ಮೇಲಾಗಿದ್ದು, ಪ್ರತಿ ಕೆ.ಜಿ. ತೊಗರಿ ಬೇಳೆಗೆ ₹160 ಕೊಟ್ಟು ಖರೀದಿಸಬೇಕಾಗಿದೆ. 15 ದಿನಗಳ ಹಿಂದಷ್ಟೇ ರಿಟೇಲ್ ಮಾರುಕಟ್ಟೆಯಲ್ಲಿ ತೊಗರಿ ಬೇಳೆ ದರ ₹120ರ ಆಸುಪಾಸಿನಲ್ಲಿತ್ತು. ಒಮ್ಮೆಲೇ ₹40ರಷ್ಟು ಹೆಚ್ಚಳವಾಗಿದೆ.

ರಾಜ್ಯದಲ್ಲಿ ಅತಿ ಹೆಚ್ಚು ತೊಗರಿ ಬೆಳೆಯುವ ಜಿಲ್ಲೆಗಳ ಪೈಕಿ ಕಲಬುರಗಿ ಅಗ್ರಸ್ಥಾನದಲ್ಲಿದೆ. ರೈತರ ಬಳಿ ಇದ್ದ ತೊಗರಿ ಈಗಾಗಲೇ ಮಾರಾಟವಾಗಿದೆ. ಮಾರುಕಟ್ಟೆಗೆ ಮುಂದಿನ ಬೆಳೆ ಬರುವವರೆಗೂ ತೊಗರಿ ಪೂರೈಕೆ ಆಗುವುದಿಲ್ಲ. ಹಾಗಾಗಿ, ಬೆಲೆ ಏರುಗತಿಯಲ್ಲೇ ಇರಲಿದೆ. ಬೆಲೆಯು ಪ್ರತಿ ಕ್ವಿಂಟಲ್‌ಗೆ ಗರಿಷ್ಠ ₹15 ಸಾವಿರದಿಂದ ₹16 ಸಾವಿರ ತಲುಪಬಹುದು. ಹಾಗಾದರೆ, ತೊಗರಿ ಬೇಳೆ ದರ ಕೆ.ಜಿಗೆ ₹200 ದಾಟಬಹುದು ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡುತ್ತಿದ್ದಾರೆ.

ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ಮಣ್ಣಿನಲ್ಲಿರುವ ಸುಣ್ಣದ ಕಲ್ಲಿನ ಅಂಶವು ತೊಗರಿಗೆ ಅಗತ್ಯವಾದ ಖನಿಜಾಂಶಗಳನ್ನು ಪೂರೈಸುತ್ತದೆ. ಇದರಿಂದಾಗಿಯೇ ಉಳಿದ ಭಾಗಗಳಲ್ಲಿ ಬೆಳೆದ ತೊಗರಿಗೆ ಹೋಲಿಸಿದರೆ ಕಲಬುರಗಿ ಸೀಮೆಯ ತೊಗರಿ ಬೇಳೆಯು ಗಾತ್ರದಲ್ಲಿ ದಪ್ಪವಾಗಿರುತ್ತದೆ. ಇದನ್ನೇ ಮಾರುಕಟ್ಟೆಯಲ್ಲಿ ಪಟಗಾ ತೊಗರಿ (ಉತ್ಕೃಷ್ಟ ಗುಣಮಟ್ಟ) ಎಂದು ಮಾರಾಟ ಮಾಡಲಾಗುತ್ತದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಕ್ವಿಂಟಲ್‌ಗೆ ಗರಿಷ್ಠ ₹8,273ಕ್ಕೆ ತೊಗರಿ ಮಾರಾಟವಾಗಿತ್ತು. ಇದು ಅವರೆಗಿನ ದಾಖಲೆಯ ಬೆಲೆ ಆಗಿತ್ತು. ನಂತರ ₹7,000ದಿಂದ ₹7,500ಕ್ಕೆ ಮಾರಾಟವಾಗಿತ್ತು. ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ವ್ಯಾಪಕವಾಗಿ ನೆಟೆ ರೋಗ ಕಾಣಿಸಿಕೊಂಡಿದ್ದರಿಂದ ತೊಗರಿ ಇಳುವರಿ ಗಣನೀಯವಾಗಿ ಕುಸಿದಿತ್ತು. ಇದರಿಂದಾಗಿಯೇ ನೆಟೆ ರೋಗಕ್ಕೆ ಪರಿಹಾರ ಕಂಡುಹಿಡಿಯಬೇಕು ಎಂಬ ಕೂಗು ರೈತ ಸಮುದಾಯದಿಂದ ವ್ಯಾಪಕವಾಗಿ ಕೇಳಿಬಂದಿತ್ತು. ಗಾಯದ ಮೇಲೆ ಬರೆ ಎಳೆದಂತೆ ಕಳೆದ ಅಕ್ಟೋಬರ್‌ನಲ್ಲಿ ಸುರಿದ ಮಳೆಯಿಂದಾಗಿ ತೊಗರಿ ಬೆಳೆಯು ಸಂಪೂರ್ಣವಾಗಿ ಜಲಾವೃತವಾಯಿತು. ನೆಟೆ ರೋಗದ ಹೊಡೆತದಿಂದ ಕಂಗಾಲಾಗಿದ್ದ ರೈತರಿಗೆ ಅತಿವೃಷ್ಟಿಯು ಶಾಪವಾಗಿ ಪರಿಣಮಿಸಿತು. ಇದರಿಂದಾಗಿ ಉತ್ಪಾದನೆಯು ಮೇಲೆ ಗಂಭೀರ ಪರಿಣಾಮ ಉಂಟಾಯಿತು.

ಕಳೆದ ವರ್ಷ ಕಲಬುರಗಿ ಜಿಲ್ಲೆಯೊಂದರಲ್ಲೇ 4.87 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿಯನ್ನು ಬೆಳೆಯಲಾಗಿತ್ತು. ನೆಟೆ ರೋಗ ಮತ್ತು ಅತಿವೃಷ್ಟಿಯಿಂದಾಗಿ 2.37 ಲಕ್ಷ ಹೆಕ್ಟೇರ್ ತೊಗರಿ ಬೆಳೆ ಸಂಪೂರ್ಣ ನಾಶವಾಯಿತು. 2.5 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದ ಬೆಳೆ ಮಾತ್ರ ರೈತರ ಕೈಗೆ ಸಿಕ್ಕಿತು. ಕೃಷಿ ಇಲಾಖೆಯ ಅಂದಾಜಿನ ಪ್ರಕಾರ 4.87 ಲಕ್ಷ ಹೆಕ್ಟೇರ್‌ನಲ್ಲಿ ಉತ್ಪಾದನೆ ಇಳುವರಿ ಬಂದಿದ್ದರೆ 50 ಲಕ್ಷ ಕ್ವಿಂಟಲ್ ತೊಗರಿ ಉತ್ಪಾದನೆ ಆಗುತ್ತಿತ್ತು. ಆದರೆ, 33 ಲಕ್ಷ ಕ್ವಿಂಟಲ್ ಮಾತ್ರ ಉತ್ಪಾದನೆಯಾಗಿದೆ. ಇದರ ಪರಿಣಾಮ ಬೆಲೆಯಲ್ಲಿ ವಿಪರೀತ ಏರಿಕೆಯಾಗುತ್ತಿದೆ ಎನ್ನುತ್ತಾರೆ ಎಪಿಎಂಸಿ ಮೂಲಗಳು.

8.52 ಲಕ್ಷ ಹೆಕ್ಟೇರ್ ಕಲಬುರಗಿ ಜಿಲ್ಲೆಯ ಬಿತ್ತನೆ ಯೋಗ್ಯ ಪ್ರದೇಶ

5.79 ಲಕ್ಷ ಹೆಕ್ಟೇರ್ ಈ ವರ್ಷ ತೊಗರಿ ಬಿತ್ತನೆಯಾದ ಪ್ರದೇಶ

4.87 ಲಕ್ಷ ಹೆಕ್ಟೇರ್ ಕಳೆದ ವರ್ಷ ತೊಗರಿ ಬಿತ್ತನೆ ಮಾಡಿದ್ದ ಪ್ರದೇಶ

ಕಲಬುರಗಿಯ ಗಂಜ್‌ನ ಎಪಿಎಂಸಿ ಮಾರುಕಟ್ಟೆಯಲ್ಲಿ ಕಾರ್ಮಿಕ ಮಹಿಳೆಯೊಬ್ಬರು ತೊಗರಿಯನ್ನು ಸ್ವಚ್ಛಗೊಳಿಸುತ್ತಿರುವುದು ವಜ್ರನಾಡ ಚಿತ್ರ/ತಾಜುದ್ದೀನ್ ಆಜಾದ್



50 ಲಕ್ಷ ಕ್ವಿಂಟಲ್ ನಿರೀಕ್ಷಿಸಿದ್ದ ತೊಗರಿ ಉತ್ಪಾದನೆ

33 ಲಕ್ಷ ಕ್ವಿಂಟಲ್ ಉತ್ಪಾದನೆಯಾದ ತೊಗರಿ

ಗ್ರಾಹಕರ ಸಹಾಯಕ್ಕೆ ಬಾರದ ಮಂಡಳಿ

ರೈತರು ಹಾಗೂ ಗ್ರಾಹಕರ ಮಧ್ಯೆ ಕೊಂಡಿಯಂತೆ ಕೆಲಸ ಮಾಡಬೇಕಿದ್ದ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು ತೊಗರಿ ಖರೀದಿಸಲಾಗದೇ ಇರುವುದರಿಂದ ರಿಯಾಯಿತಿ ದರದಲ್ಲಿ ತೊಗರಿ ಬೇಳೆ ವಿತರಣೆಯೂ ಸಡಿಯುತ್ತಿಲ್ಲ.

ಜನವರಿ, ಫೆಬ್ರುವರಿ ತಿಂಗಳಲ್ಲಿ ಹೊಸದಾಗಿ ತೊಗರಿ ಉತ್ಪನ್ನ ಬಂದಾಗಲೇ ತಸ್ಸಲಿ ನೋಂದಾಯಿಸಿಕೊಂಡ ರೈತರಿಗೆ ಮಾತ್ರ ಮಾರುಕಟ್ಟೆ ಬೆಲೆಗಿಂತ ಪ್ರತಿ ಕ್ವಿಂಟಲ್‌ಗೆ ₹100 ಹೆಚ್ಚುವರಿಯಾಗಿ ಪಾವತಿಸಿ ಖರೀದಿಸುವುದಾಗಿ ಮಂಡಳಿ ತಿಳಿಸಿತ್ತು. ಆದರೆ, ನಿರ್ದಿಷ್ಟ ಗುಣಮಟ್ಟದ ತೊಗರಿಯನ್ನು ಮಾತ್ರ ಖರೀದಿಸುವುದಾಗಿ ಷರತ್ತು ವಿಧಿಸಿತ್ತು. ಇದರಿಂದಾಗಿ ರೈತರು ಮಂಡಳಿಗೆ ತೊಗರಿ ಮಾರಾಟ ಮಾಡಲೇ ಇಲ್ಲ. ಹೀಗಾಗಿ, ತೊಗರಿಯನ್ನು ಬೇಳೆಯಾಗಿ ಸಂಸ್ಕರಿಸಿ 'ಭೀಮಾ ಪಲ್ಸ್' ಹೆಸರಿನಲ್ಲಿ ಬಿಡುಗಡೆ ಮಾಡುವ ಯತ್ನ ಕ್ಯಾಡಲಿನಲ್ಲಿ ಎನ್ನುತ್ತಾರೆ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಅಂಥೋನಿ ಮಾರಿಯಾ ಅಮ್ಮಾಸುವೆಲ್.

₹10 ಸಾವಿರ ಬೆಂಬಲ ಬೆಲೆಗೆ ಬೇಡಿಕೆ

ಕಲಬುರಗಿ ಜಿಲ್ಲೆಯ ತೊಗರಿಯು ಸುಣ್ಣದ ಕಲ್ಲುಗಳಿರುವ ಜಮೀನಿನಲ್ಲಿ ಬೆಳೆಯುವುದರಿಂದ ಹೇರಳವಾಗಿ ಪ್ರೊಟೀನ್ ಹೊಂದಿರುತ್ತದೆ. ಹೀಗಾಗಿ, ಜಿಲ್ಲೆಯಲ್ಲಿ ತೊಗರಿ ಬೆಳೆಯುವ ಪ್ರದೇಶ ವಿಸ್ತರಣೆಯಾಗಬೇಕಿದ್ದರೆ ಉತ್ತಮ ದರ ಸಿಗಬೇಕು. ಆದ್ದರಿಂದ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ₹10 ಸಾವಿರಕ್ಕೆ ನಿಗದಿಪಡಿಸಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸಿವೆ. ಜೊತೆಗೆ, ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿವೆ. ಆದರೆ, ಬೆಂಬಲ ಬೆಲೆ ನಿಗದಿಪಡಿಸುವ ಕೇಂದ್ರ ಸರ್ಕಾರವು ಈ ಬೇಡಿಕೆಯನ್ನು ಈಡೇರಿಸುವ ಗೋಜಿಗೆ ಹೋಗಿಲ್ಲ.

ಕಳೆದ ವರ್ಷ ಪ್ರತಿ ಕ್ವಿಂಟಲ್ ತೊಗರಿಗೆ ಕನಿಷ್ಠ ಬೆಂಬಲ ಬೆಲೆ ₹6,600 ನಿಗದಿಪಡಿಸಲಾಗಿತ್ತು, ತಾಂತ್ರಿಕೆಯೆಂದರೆ ಅದಾಗಲೇ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ₹7,000 ಇತ್ತು. ಹೀಗಾಗಿ, ರೈತರು ಕನಿಷ್ಠ ಬೆಂಬಲ ಬೆಲೆಯಡಿ ಮಾರಾಟ ಮಾಡಲು ಮುಂದಾಗಲಿಲ್ಲ.

'ಸರ್ಕಾರ ಬೆಂಬಲ ಬೆಲೆಯನ್ನು ₹10 ಸಾವಿರ ನಿಗದಿಪಡಿಸಿದರೆ ಇದರಿಂದ ಆಕರ್ಷಿತರಾಗುವ ರೈತರು ಹೆಚ್ಚು ತೊಗರಿ ಬೆಳೆಯಲು ಮುಂದಾಗುತ್ತಾರೆ. ಉತ್ಪಾದನೆ ಹೆಚ್ಚಾದರೆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆಗೂ ಅಧಿಕ ಪ್ರಮಾಣದಲ್ಲಿ ತೊಗರಿ ಬೇಳೆಯನ್ನು ನೀಡಬಹುದು. ಪಡಿತರದ ಮೂಲಕವೂ ವಿತರಿಸಬಹುದು' ಎನ್ನುತ್ತಾರೆ ರೈತ ಚಳವಳಿಯಲ್ಲಿ ಗುರುತಿಸಿಕೊಂಡಿರುವ ಆಳಂದ ಶಾಸಕ ಬಿ.ಆರ್. ಪಾಟೀಲ.

₹8,273 2022ರಲ್ಲಿ ಕ್ವಿಂಟಲ್‌ಗೆ ದೊರಕಿದ್ದ ಗರಿಷ್ಠ ಬೆಲೆ

₹12,746 ಪ್ರತಿ ಕ್ವಿಂಟಲ್‌ಗೆ ಈಗ ಇರುವ ಬೆಲೆ

ನಿನ್ನೆಡಗೆ. 'ಇತ್ತೀಚೆಗೆ ಬರುತ್ತಿರುವ ತೊಗರಿಯ ಗುಣಮಟ್ಟವೂ ಚೆನ್ನಾಗಿಲ್ಲ' ಎಂದು ಅವರು ಹೇಳುತ್ತಾರೆ.

ರೈತರಿಗೆ ಸಿಗದ ಬೆಲೆ ಏರಿಕೆ ಲಾಭ: ತೊಗರಿ ಬೆಲೆ ಏರಿಕೆ ಕಂಡರೂ ಅದರ ಲಾಭ ಮಾತ್ರ ರೈತರಿಗೆ ಸಿಕ್ಕಿಲ್ಲ ಎಂಬ ಆರೋಪ ರೈತ ಸಂಘಟನೆಗಳದ್ದು. ತೊಗರಿ ಬೆಳೆ ಬಂದ ಕೂಡಲೇ ಬಿತ್ತನೆ ಸಂದರ್ಭದಲ್ಲಿ ಮಾಡಿದ್ದ ಬೀಜ, ಗೊಬ್ಬರದ ಸಾಲವನ್ನು ತೀರಿಸಲು ರೈತರು ಬೆಳೆ ಮಾರಾಟ ಮಾಡಿದ್ದಾರೆ. ಆಗ ಅವರಿಗೆ ಅಬ್ಬಬ್ಬಾ ಎಂದರೆ ಕ್ವಿಂಟಲ್‌ಗೆ ₹7 ಸಾವಿರ ದರ ಸಿಕ್ಕಿದೆ. ಅದನ್ನೇ ಸಂಗ್ರಹ ಮಾಡಿಕೊಂಡಿರುವ ವರ್ತರು ಇದೀಗ ಹೆಚ್ಚಿನ ಬೆಲೆಗೆ ಮಾರುಕಟ್ಟೆಗೆ ದಿಡುಗಡೆ ಮಾಡುತ್ತಿದ್ದಾರೆ.

ಮತ್ತೊಂದೆಡೆ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು (ಮೊದಲಿನ ತೊಗರಿ ಅಭಿವೃದ್ಧಿ ಮಂಡಳಿ) 'ಭೀಮಾ ಪಲ್ಸ್' ಹೆಸರಿನಲ್ಲಿ ಕಡಿಮೆ ದರದಲ್ಲಿ ಗ್ರಾಹಕರಿಗೆ ತೊಗರಿ ಬೇಳೆ ಪೂರೈಸುವುದಾಗಿ ಘೋಷಣೆ ಮಾಡಿತ್ತು. ಆದರೆ, ಅದಿನ್ನೂ ಮಾರುಕಟ್ಟೆಗೆ ದಿಡುಗಡೆಯಾಗಿಲ್ಲ. ಹೀಗಾಗಿ, ವ್ಯಾಪಾರಿಗಳಿಂದಲೇ ದುಬಾರಿ ಬೆಲೆಗೆ ಖರೀದಿ ಮಾಡಬೇಕಿದೆ.

11-09-2023
Prajavani Pg 09

11-09-2023
Udayavani Pg 08

ಸಸಿಗಳ ದರ ಪರಿಷ್ಕರಣೆ ■ ಹಿಂದಿನ ಬೆಲೆಗಿಂತ ಕೊಂಚ ಏರಿಕೆ

ರೈತರಿಗೆ ಸಿಹಿ ಸುದ್ದಿ ಕೊಟ್ಟ ಅರಣ್ಯ ಇಲಾಖೆ

• ಅವಿನಾಶ ಮೂಡಂಬಿಕಾನ

ಬೆಂಗಳೂರು: ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಸಸಿಗಳ ಬೆಲೆ ಏಕಾಏಕಿ ದುಬಾರಿಗೊಳಿಸಿದ್ದ ರಾಜ್ಯ ಸರ್ಕಾರದ ನಡೆಗೆ ಭಾರೀ ವಿರೋಧ ವ್ಯಕ್ತವಾದ ಬೆನ್ನಲ್ಲೇ ಇದೀಗ ಮತ್ತೆ ದರ ಪರಿಷ್ಕರಣೆ ಮಾಡಿ ರೈತರಿಗೆ ಸಿಹಿ ಸುದ್ದಿ ಕೊಟ್ಟಿದೆ.

ರೈತರು, ತೋಟಗಾರಿಕಾ ಬೆಳೆಗಾರರಿಗೆ ನೆರವಾಗುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯು ಹತ್ತಾರು ವರ್ಷಗಳಿಂದ ರಿಯಾಯಿತಿ ದರಗಳಲ್ಲಿ ನೂರಾರು ಜಾತಿಗಳ ಸಸಿಗಳನ್ನು ರೈತರಿಗೆ ವಿತರಿಸುತ್ತಿದೆ. ಸರ್ಕಾರಿ ನರ್ಸರಿಗಳ ಸಸಿಗಳನ್ನೇ ಅವಲಂಬಿಸಿರುವ ರೈತರಿಗೆ 2023-24ನೇ ಸಾಲಿನ ಸಸಿಗಳ ದರ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಗಿತ್ತು. ಇದರಿಂದ ಕಂಗೆಟ್ಟಿದ್ದ ರೈತರು ನರ್ಸರಿಗಳತ್ತ ಮುಖ ಮಾಡಿರಲಿಲ್ಲ. ಕಳೆದ 2 ತಿಂಗಳಿನಿಂದ ಮಾರಾಟವಾಗದ ಲಕ್ಷಾಂತರ ಸಸಿಗಳ ನಿರ್ವಹಣೆ ಮಾಡುವುದೇ ಅರಣ್ಯ ಸಿಬ್ಬಂದಿಗೆ ತಲೆನೋವಾಗಿತ್ತು. ಇತ್ತ ರೈತರು ಸಸಿಗಳ ದರ ಇಳಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದರು. ಸಸಿಗಳ ಬೆಲೆ ಇಳಿಸಲು ಅನುಮತಿ ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದನ್ನು ಮನಗಂಡ ಸರ್ಕಾರ ಕೊನೆಗೂ ನರ್ಸರಿ ಸಸಿಗಳ ದರ ಮತ್ತೆ ಪರಿಷ್ಕರಣೆ ಮಾಡಿದೆ. ಆದರೆ, ಹಿಂದಿನ ದರಕ್ಕಿಂತ ಕೊಂಚ ಏರಿಕೆಯಾಗಿದೆ.

ದಾಖಲೆಯಿದ್ದರಷ್ಟೇ ಸಸಿ ಪಡೆಯಬಹುದು: ರೈತರು ಮಾತ್ರವಲ್ಲದೇ ಶಾಲಾ-ಕಾಲೇಜುಗಳು, ಆಸ್ಪತ್ರೆಗಳು, ಕಾರ್ಖಾನೆಗಳು, ವಿವಿಧ ಸಂಸ್ಥೆಗಳೂ ಸರ್ಕಾರಿ ನರ್ಸರಿಗಳ ಗ್ರಾಹಕರಾಗಿದ್ದಾರೆ. ಖರೀದಿದಾರರು ತಮ್ಮ ಜಾಗದ ಪಹಣಿ ಪತ್ರ, ನಿವೇಶನಗಳ ಪತ್ರ ಅಥವಾ ಭೂಮಿಯ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅರಣ್ಯ ಅಧಿಕಾರಿಗಳಿಗೆ ಒದಗಿಸಿದರೆ ಮಾತ್ರ ಜಾಗಗಳಿಗೆ ಅನುಗುಣವಾಗಿ ಸಸಿಗಳನ್ನು ನೀಡುತ್ತಾರೆ. ಕರ್ನಾಟಕದ ರೈತರಿಂದ ಶ್ರೀಗಂಧ, ಮಹಗನಿ, ಸಿಲ್ವರ್‌ವೊಕ್, ತೇಗ, ಬೀಟೆ, ಹೊನ್ನೆ ರಕ್ತಚಂದನ, ಹಲಸು, ಬಾಳೆಗಳಂತಹ ಸಸಿಗಳಿಗೆ ಇತ್ತೀಚೆಗೆ ಭಾರೀ ಬೇಡಿಕೆ ವ್ಯಕ್ತವಾಗುತ್ತಿದೆ. ಶೇ.80ರಷ್ಟು ರೈತರೇ ನರ್ಸರಿ ಗ್ರಾಹಕರಾಗಿದ್ದು ಒಂದೇ ಬಾರಿಗೆ ಸಾವಿರಾರು ಸಸಿ ಖರೀದಿಸುತ್ತಾರೆ. ಬೆಲೆ ಬಾಳುವ ಮರ ಮಾರಾಟ ಮಾಡಿ ವಾರ್ಷಿಕವಾಗಿ ಲಕ್ಷಾಂತರ ರೂ. ಜೇಬಿಗಿಳಿಸಿದ ನೂರಾರು ರೈತರು ರಾಜ್ಯದಲ್ಲಿದ್ದಾರೆ ಎನ್ನುತ್ತಾರೆ ನರ್ಸರಿ ಸಿಬ್ಬಂದಿ.

ತೋಟಗಾರಿಕಾ ಬೆಳೆಗಾರರು ಸೀಬೆ, ನೆಲ್ಲಿ, ದಾಳಿಂಬೆ, ಜಾಮೂನ್, ಅಶ್ವಗಂಧ, ದುಂಡು ಮಲ್ಲಿಗೆ, ದೊಡ್ಡ ಬಿದಿರಿನಂತಹ ಸಸಿಗಳನ್ನು ಕೊಂಡೊಯ್ಯುತ್ತಾರೆ. ಪ್ರಮುಖ ನಗರಗಳಲ್ಲಿರುವ ಕಾರ್ಖಾನೆಗಳು, ಶಾಲಾ-ಕಾಲೇಜು ನಂತಹ ಸಂಸ್ಥೆಗಳು ತಬೋಬಿಯಾ, ಗುಲ್ಮೋರ್, ಸಕ್ರಾಂಡದಂತಹ ಹೂವಿನ ಸಸಿ ಖರೀದಿಸುತ್ತಾರೆ. ರಾಜ್ಯದ ಪ್ರತಿ ತಾಲೂಕಿನಲ್ಲಿ ಅಥವಾ 2 ನರ್ಸರಿಗಳಿದ್ದು ಇಲ್ಲಿನ ಸಿಬ್ಬಂದಿ 1 ವರ್ಷಗಳ ಕಾಲ ಸಸಿ ನಿರ್ವಹಣೆಯಲ್ಲಿ ತೊಡಗುತ್ತಾರೆ. ಖಾಸಗಿಯಲ್ಲಿ ಇದೇ ಸಸಿಗಳು 50ಪಟ್ಟು ಅಧಿಕ ಬೆಲೆಗೆ ಮಾರಾಟವಾಗುತ್ತವೆ ಎಂದು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.



ಸಾಂದರ್ಭಿಕ ಚಿತ್ರ

ದುಬಾರಿ ಬೆಲೆ ವಿಧಿಸಿದ್ದ ಸರ್ಕಾರ

2023ರಲ್ಲಿ 5X8 ಅಳತೆಯ ಸಸಿಗಳಿಗೆ 1 ರೂ.ನಿಂದ 5 ರೂ.ಗೆ, 6X9 ಸಸಿಗಳಿಗೆ 1 ರೂ.ನಿಂದ 6 ರೂ.ಗೆ, 8X12 ಸಸಿಗಳಿಗೆ 3 ರೂ.ನಿಂದ 23 ರೂ.ಗೆ, 10X16 ಸಸಿಗಳನ್ನು 5 ರೂ.ನಿಂದ 72 ರೂ.ಗೆ ಹಾಗೂ 14X20 ಅಳತೆಯ ಸಸಿಗಳ ಬೆಲೆಗಳನ್ನು 5 ರೂ.ನಿಂದ 111 ರೂ.ಗೆ ಏರಿಸಲಾಗಿತ್ತು.

ಸಸಿಗಳ ಪರಿಷ್ಕರಣೆ ದರ ಎಷ್ಟು ?


5X8 ಅಳತೆಯ ಸಸಿಗಳಿಗೆ 5 ರೂ. ನಿಂದ 2 ರೂ.ಗೆ (ಶೇ.80.12 ರಿಯಾಯಿತಿ) ಬೆಲೆ ಇಳಿಸಲಾಗಿದೆ. 6X9 ಅಳತೆಗಳ ಸಸಿಗಳಿಗೆ 6 ರೂ.ನಿಂದ 3 ರೂ.ಗೆ (ಶೇ.77.58 ರಿಯಾಯಿತಿ), 8X12 ಅಳತೆಗಳ ಸಸಿಗಳ ದರ 23 ರೂ.ನಿಂದ 6 ರೂ.ಗೆ (ಶೇ.81.38 ರಿಯಾಯಿತಿ) ಪರಿಷ್ಕರಣೆ ಮಾಡಲಾಗಿದೆ. ದೊಡ್ಡ ಗಾತ್ರದ ಸಸಿಗಳಾದ 10X16 ಹಾಗೂ 14X20 ಅಳತೆಯ ಸಸಿಗಳಿಗೆ ಮುಂಚಿತವಾಗಿ ಬೇಡಿಕೆ ಸಲ್ಲಿಸಿದರೆ ಉತ್ಪಾದನಾ ವೆಚ್ಚದಲ್ಲಿ ಮಾರಾಟ ಮಾಡಲು ಸರ್ಕಾರ ಆದೇಶಿಸಿದೆ. ಕಸಿ ಮಾಡಿದ ಸಸಿಗಳಿಗೆ ಶೇ.50 ರಿಯಾಯಿತಿ ನೀಡಲು ಸೂಚಿಸಲಾಗಿದೆ.

> ಸಾರ್ವಜನಿಕರ ವಿತರಣೆಗಾಗಿ ಅರಣ್ಯ ಇಲಾಖೆಯ ಯೋಜನೆಗಳ ಅಡಿಯಲ್ಲಿ ಬೆಳೆಸಲಾಗುವ ಸಸಿಗಳ ಮಾರಾಟ ಮಾಡಲು ಪರಿಷ್ಕೃತ ದರ ನಿಗದಿಪಡಿಸಲಾಗಿದೆ. ನರ್ಸರಿಗಳಲ್ಲಿ ರಿಯಾಯಿತಿ ದರಗಳಲ್ಲಿ ಸಸಿಗಳು ಲಭ್ಯವಿರುವುದು ಹಲವಾರು ರೈತರಿಗೆ ಅನುಕೂಲವಾಗಿದೆ.
>
> • ಜಾವೇದ್ ಅಖ್ತರ್, ಸರ್ಕಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ.

ಪ್ರಯೋಜನ

ಈ ಯೋಜನೆಯಡಿ ಸಣ್ಣ ಹಾಗೂ ಅತಿ ಸಣ್ಣ ರೈತರು ಅರ್ಜಿ ಸಲ್ಲಿಸಿ ಉಚಿತವಾಗಿ ಕೊಳವೆ ಬಾವಿ/ ತೆರೆದ ಬಾವಿಯ ಸೌಲಭ್ಯ ಪಡೆಯಬಹುದಾಗಿದ್ದು ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಬಿಡುಗಡೆಯಾದ ಅನುದಾನದ ಆಧಾರದ ಮೇಲೆ ಗಂಗಾ ಕಲ್ಯಾಣ ಯೋಜನೆಗೆ ಹಣ ಬಿಡುಗಡೆ ಆಗುತ್ತದೆ. ಅಂದರೆ ಆಯಾ ನಿಗಮಗಳಲ್ಲಿ ಅದರದ್ದೇ ಆದ ನಿಯಮಗಳು ಜಾರಿಯಲ್ಲಿವೆ.

ಗಂಗಾ ಕಲ್ಯಾಣ ರೈತರಿಗೆ ವರದಾನ



ಆಯ್ಕೆ ಪಟ್ಟಿ ಮತ್ತು ವಿಧಾನ ಹೇಗೆ?

ಜಿಲ್ಲಾ ವ್ಯವಸ್ಥಾಪಕರು ಪ್ರತಿ ಜಿಲ್ಲೆಯಲ್ಲಿ ಜಾಹೀರಾತಿನ ಮೂಲಕ ಆನ್‌ಲೈನ್‌ನಲ್ಲಿ ಮೂಲಕ ಅರ್ಜಿ ಆಹ್ವಾನಿಸುತ್ತಾರೆ. ಆನ್‌ಲೈನ್‌ನಲ್ಲಿ ದಾಖಲಾತಿಯೊಂದಿಗೆ ಸಲ್ಲಿಸಿದ ಅರ್ಜಿಗಳನ್ನು ಜಿಲ್ಲಾ ವ್ಯವಸ್ಥಾಪಕರು ಗಮನಿಸಿ ಶಾಸಕರ ನೇತೃತ್ವದ ತಾಲೂಕು ಸಮಿತಿಗೆ ಅರ್ಜಿ ವರ್ಗಾಯಿಸುತ್ತಾರೆ. ನಂತರ ಸಮಿತಿಯು ಸಂಬಂಧಿಸಿದ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸುತ್ತದೆ. ಈ ಸಂಬಂಧ ಗಂಗಾ ಕಲ್ಯಾಣ ಯೋಜನೆಯ ವಿವರಗಳನ್ನು https://kmvstdcl.karnataka.gov.in/info-2/Ganga+Kalyana+Scheme/en ನಲ್ಲಿ ಪಡೆಯಬಹುದಾಗಿದೆ. ಅಲ್ಲದೇ ಹೆಚ್ಚಿನ ಮಾಹಿತಿಗಾಗಿ ಅರ್ಹರು +91 08022864720ಕ್ಕೆ ಸಂಪರ್ಕಿಸಬಹುದು.

ಏನಿದು ಗಂಗಾ ಕಲ್ಯಾಣ?

ಬೋರ್‌ವೆಲ್ ಕೊರೆಯುವ ಮೂಲಕ ಹಾಗೂ ತೆರೆದ ಬಾವಿ ತೋಡುವ ಮೂಲಕ ಕೃಷಿ ಭೂಮಿಗೆ ನೀರನ್ನು ಪೂರೈಸುವುದೇ ಗಂಗಾ ಕಲ್ಯಾಣ ಯೋಜನೆಯಾಗಿದೆ. ಅಲ್ಲದೇ, ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಿ ಪಂಪ್-ಮೋಟಾರ್ ಅಳವಡಿಸುವುದಾಗಿದೆ.

ಎಲ್ಲೆಲ್ಲಿ ಅರ್ಜಿ?

1. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ
2. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
3. ಪರಿಶಿಷ್ಟ ಜಾತಿ- ವರ್ಗಗಳ ಅಭಿವೃದ್ಧಿ ನಿಗಮ
4. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ
5. ವಿಶ್ವಕರ್ಮ ಅಭಿವೃದ್ಧಿ ನಿಗಮ
6. ಉಪ್ಪಾರ ಅಭಿವೃದ್ಧಿ ನಿಗಮ
7. ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ
8. ನಿಜಗುಣ ಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ
9. ಬೋವಿ ಸಮುದಾಯದ ಅಭಿವೃದ್ಧಿ ನಿಗಮ

ಅರ್ಹರು ಯಾರ್ಯಾರು?

- ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು.
- ಪ್ರವರ್ಗ 1, 2ಎ, 3ಎ, 3ಬಿ ಹಿಂದುಳಿದ ವರ್ಗಕ್ಕೆ ಸೇರಿರಬೇಕು.
- ಕನಿಷ್ಠ 1.20 ಎಕರೆ ಗರಿಷ್ಠ 5 ಎಕರೆ ಜಮೀನು ಹೊಂದಿರಬೇಕು.
- ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಜಿಲ್ಲೆಯ ರೈತರಿಗೆ ಕನಿಷ್ಠ 1 ಎಕರೆ ಇದ್ದರೆ ಸಾಕು
- ಅರ್ಜಿದಾರ ಯಾವುದೇ ಕೇಂದ್ರ-ರಾಜ್ಯ ಸರ್ಕಾರದ ಹುದ್ದೆಯಲ್ಲಿ ಇರಬಾರದು
- ರಾಜ್ಯ ಕಾಯಂ ನಿವಾಸಿ ಆಗಿರಬೇಕು
- ಅರ್ಜಿದಾರರು 18-55 ವರ್ಷಗಳ ನಡುವೆ ಇರಬೇಕು

ವೈಯಕ್ತಿಕ ಬೊರ್ವೆಲ್‌ಗೆ ಠೇವಣಿ

1. ನೋಂದಣಿ ಶುಲ್ಕ - 50 ರೂ. ಪ್ಲಸ್ ಶೇ.18 ಜಿಎಸ್‌ಟಿ
2. ಭದ್ರತಾ ಠೇವಣಿ ಶುಲ್ಕ- 1290 ರೂ., 1 ಎಚ್‌ಪಿಗೆ
3. ಮೀಟರ್ ಸುರಕ್ಷಾ ಠೇವಣಿ 3 ಸಾವಿರ ರೂ.,
4. ಮೀಟರ್ ಬಾಕ್ಸ್ 2100 ರೂ.
5. ಮೇಲ್ವಿಚಾರಣಾ ಶುಲ್ಕ 150 ಪ್ಲಸ್ ಶೇ.18 ಜಿಎಸ್‌ಟಿ

ಅರ್ಜಿ ಸಲ್ಲಿಕೆಗೆ ಸೆ.18 ಕೊನೇ ದಿನ

ಅಂತರ್ಜಲ ಕಡಿಮೆಯಾಗಿರುವ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು ಜಿಲ್ಲೆಗಳಿಗೆ ಅನ್ವಯವಾಗುತ್ತದೆ. ಇತರೆ ಜಿಲ್ಲೆಗಳಿಗೆ 3 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ಯೋಜನೆಯಡಿ ಅರ್ಜಿ ಸಲ್ಲಿಕೆಗೆ ಸೆ.18 ಕೊನೇ ದಿನವಾಗಿದ್ದು ಅರ್ಹ ರೈತರು https://kmvstdcl.karnataka.gov.in/info-2/Ganga+ Kalyana+Scheme/en ಕ್ಕೆ ಆನ್‌ಲೈನ್ ವೀಕ್ಷಿಸಬಹುದಾಗಿದೆ.

ಏನೇನು ಬೇಕು?

ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಫಲಾನುಭವಿಗಳ ಭಾವಚಿತ್ರ, ಬ್ಯಾಂಕ್ ಪಾಸ್ ಬುಕ್, ಹೊಲದ ದಾಖಲೆ, ಜಾತಿ-ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಪಾನ್ ಕಾರ್ಡ್, ಸ್ವಯಂ ಘೋಷಿತ ಪತ್ರ ಅವಶ್ಯ.

ಹರೀಶ್ ಹಾಡೋನಹಳ್ಳಿ

11-09-2023
Udayavani Pg 06